
# ಅಬ್ದುಲ್ ಹಮೀದ್

ಲಕ್ಷ್ಮಣ ಕೊಡಸೆ



# ಅಬ್ದುಲ್ ಹಮೀದ್

## (ಹುತಾತ್ಮ ಭಾರತೀಯ ಯೋಧ)

## (1 ಜುಲೈ 1933– 10 ಸೆಪ್ಟೆಂಬರ್ 1965)

## 1. ಪರಿಚಯ

ಉತ್ತರ ಪ್ರದೇಶ ಭಾರತದ ದೊಡ್ಡ ರಾಜ್ಯಗಳಲ್ಲಿ ಒಂದು. ಗಂಗಾ ಮತ್ತು ಯಮುನಾ ನದಿಗಳು ಹರಿಯುತ್ತಿರುವ ಮತ್ತು ಹಿಮಾಲಯ ಪರ್ವತಶ್ರೇಣಿಯನ್ನು ಉತ್ತರ ಗಡಿಯಾಗಿ ಹೊಂದಿರುವ ಈ ರಾಜ್ಯ ಇತಿಹಾಸದಲ್ಲಿ ಪ್ರಸಿದ್ಧವಾದುದು. ಮೌರ್ಯರು, ಕುಶಾನರು, ಗುಪ್ತರು, ಗುರ್ಜರರು, ಪ್ರತಿಹಾರಿಗಳು, ಪ್ರಾಚೀನ ಮತ್ತು ಮಧ್ಯಯುಗದಲ್ಲಿ ಇಲ್ಲಿ ರಾಜ್ಯಾಡಳಿತ ನಡೆಸಿದ್ದಾರೆ. ಕನೌಜದ ಚಕ್ರವರ್ತಿ ಹರ್ಷವರ್ಧನನ ಕಾಲದಲ್ಲಿ ರಾಜ್ಯದ ವ್ಯಾಪ್ತಿ ಉತ್ತರದಲ್ಲಿ ಪಂಜಾಬ್, ಪಶ್ಚಿಮದಲ್ಲಿ ಗುಜರಾತ್, ಪೂರ್ವದಲ್ಲಿ ಒಡಿಶಾ ಮತ್ತು ದಕ್ಷಿಣದಲ್ಲಿ ನರ್ಮದಾ ನದಿಯವರೆಗೆ ವಿಸ್ತರಣೆಯಾಗಿತ್ತು. ಮೊಘಲರ ಕಾಲದಲ್ಲಿ ಇಡೀ ಹಿಂದೂಸ್ತಾನಕ್ಕೆ ಉತ್ತರ ಪ್ರದೇಶ ಕೇಂದ್ರಸ್ಥಾನದಂತೆ ಇತ್ತು.

ಇತಿಹಾಸದ ಉದ್ದಕ್ಕೂ ಪರಕೀಯರ ಆಕ್ರಮಣ ಮತ್ತು ಆಳ್ವಿಕೆಯಿಂದ ನಲುಗಿದ ಈ ಪ್ರದೇಶದಲ್ಲಿ ಸ್ವಾತಂತ್ರ್ಯ ಮತ್ತು ಪ್ರತಿಭಟನೆಯ ಸೊಲ್ಲು ಏಳುತ್ತಲೇ ಇತ್ತು. ಮೊಘಲರ ಆಳ್ವಿಕೆಯ ಕಾಲದಲ್ಲಿ ಝಾನ್ಸಿರಾಣಿ ಲಕ್ಷ್ಮೀಬಾಯಿ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಿದ್ದಳು. ಯುದ್ಧಭೂಮಿಯಲ್ಲಿ ಹೋರಾಟ ನಡೆಸಿದ ಧೀರ ಮಹಿಳೆ ಝಾನ್ಸಿರಾಣಿ. ಉತ್ತರ ಪ್ರದೇಶವೂ ಒಳಗೊಂಡ ಉತ್ತರ ಭಾರತದ ಬಹುಭಾಗ ಬ್ರಿಟಿಷರ ಆಳ್ವಿಕೆಗೆ ಬಂದ ನಂತರ ಸ್ವಾತಂತ್ರ್ಯದ ಕಿಚ್ಚು ಇನ್ನಷ್ಟು ಹೆಚ್ಚಾಯಿತು. 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಂಗಲ ಪಾಂಡೆ ಬಂಡಾಯದ ಧ್ವನಿ ಎತ್ತಿದ್ದ. ಆತ ಉತ್ತರ ಪ್ರದೇಶದ ಈಗಿನ ಗಾಜಿಪುರ ಜಿಲ್ಲೆಯ ಯೋಧ. ಈ ಹೋರಾಟದಲ್ಲಿ ಗುರ್ಜರ ಬುಡಕಟ್ಟಿಗೆ ಸೇರಿದ್ದ ರಾವ್ ಕದಂ ಸಿಂಗ್, ಮೌಲ್ವಿ ಲಿಯಾಖತ್ ಅಲಿ ಪ್ರಮುಖ ಹೋರಾಟಗಾರರಾಗಿದ್ದರು.

ಇಪ್ಪತ್ತನೆಯ ಶತಮಾನದ ಆರಂಭಕಾಲದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಚಂದ್ರಶೇಖರ ಅಜಾದ್, ರಾಮಪ್ರಸಾದ್ ಬಿಸ್ಮಿಲ್ಲ, ಗೋವಿಂದ ವಲ್ಲಭ ಪಂತ್, ಮುನೇಶ್ವರ ದತ್ತ ಉಪಾಧ್ಯಾಯ, ರಫಿ ಅಹ್ಮದ್ ಕಿದ್ವಾಯಿ, ಆಚಾರ್ಯ ನರೇಂದ್ರದೇವ್, ರಾಮಮನೋಹರ ಲೋಹಿಯಾ, ಅಸಫ್ ಅಲಿ, ಪುರುಷೋತ್ತಮ ದಾಸ್ ಟಂಡನ್, ಮೌಲಾನ ಶೌಕತ್ ಅಲಿ, ಮುಖ್ತಾರ್ ಅಹ್ಮದ್ ಅನ್ಸಾರಿ, ಸ್ವಾಮಿ ಸಹಜಾನಂದ ಸರಸ್ವತಿ, ರಾಮಸರಣ ತ್ಯಾಗಿ ಮೊದಲಾದವರೆಲ್ಲ ಉತ್ತರ ಪ್ರದೇಶ ರಾಜ್ಯಕ್ಕೆ ಸೇರಿದವರು.

ಗಾಜಿಪುರ ಜಿಲ್ಲೆಯಲ್ಲಿ ಮಗಯಿ ಎಂಬ ಸಣ್ಣ ನದಿ ಪಕ್ಕದ ಧಾಮಪುರ ಒಂದು ಕುಗ್ರಾಮ. ಅಲ್ಲಿನ ಅತ್ಯಂತ ಬಡಕುಟುಂಬ ಮಹಮದ್ ಉಸ್ಮಾನ್ ಅವರದು. ದರ್ಜಿ ವೃತ್ತಿಯಲ್ಲಿದ್ದವರು ಉಸ್ಮಾನ್. ಕುಸ್ತಿ ಪಟುವೂ ಆಗಿದ್ದ ಉಸ್ಮಾನ್ ಕೆಲವು ಕಾಲ ಸೇನೆಯಲ್ಲಿ ಲಾನ್ಸ್ ನಾಯಕ್ ಆಗಿ ಸೇವೆ ಸಲ್ಲಿಸಿದ್ದರು. ಉಸ್ಮಾನ್ ದಂಪತಿಗೆ 1933ರ ಜುಲೈ 1ರಂದು ಜನಿಸಿದವರು ಅಬ್ದುಲ್ ಹಮೀದ್.

ಬಾಲ್ಯದಲ್ಲಿಯೇ ಹಮೀದ್ ಪರೋಪಕಾರ ಬುದ್ಧಿಯವರಾಗಿದ್ದರು. ಇನ್ನೊಬ್ಬರಿಗೆ ಸಹಾಯ ನೀಡುವುದರಲ್ಲಿ ಆಸಕ್ತರಾಗಿದ್ದರು. ತಂದೆ ಉಸ್ಮಾನ್ ದರ್ಜಿ ಕೆಲಸ ಮಾಡುತ್ತಿದ್ದರು. ಆದರೆ, ಅದರಲ್ಲಿ ಹಮೀದ್ ಆಸಕ್ತಿ ತಾಳಿರಲಿಲ್ಲ. ಹುಡುಗನಾಗಿದ್ದಾಗ ಲಾಠಿ ಬೀಸುವ ಕುಸ್ತಿಯಾಡುವ ಅಭ್ಯಾಸ ಬೆಳೆಸಿಕೊಂಡಿದ್ದರು. ಬಲವಾದ ಮೈಕಟ್ಟನ್ನು ರೂಪಿಸಿಕೊಳ್ಳುತ್ತಿದ್ದ ಹಮೀದ್ ಸುತ್ತಮುತ್ತಲ ಹಳ್ಳಿಗಳಲ್ಲಿ ಗಮನ ಸೆಳೆದಿದ್ದರು. ರಾತ್ರಿ ಹೊತ್ತು ಇಡೀ ಹಳ್ಳಿ ನಿದ್ದೆಯಲ್ಲಿದ್ದರೆ ಹಮೀದ್ ದೊಣ್ಣೆವರಸೆಯ ತರಬೇತಿ ಪಡೆಯುತ್ತಿದ್ದರು. ಮರಹತ್ತುವುದು, ಗುರಿ ಇಟ್ಟು ಹೊಡೆಯುವುದು ಮತ್ತು ಮಗಯಿ ನದಿಯಲ್ಲಿ ನೆರೆ ಬಂದಾಗ ಈಜಿ ಆಚೆಯ ದಡ ಸೇರುವುದು ಅವರ ವಿಶೇಷ ಸಾಹಸಗಳಾಗಿದ್ದವು.

ಒಮ್ಮೆ ಹಳ್ಳಿಯ ಬಡವನೊಬ್ಬನ ಜಮೀನಿನಲ್ಲಿ ಬೆಳೆದ ಪೈರನ್ನು ಊರ ಜಮೀನ್ದಾರ ಬಲವಂತವಾಗಿ ಕೊಯ್ಯಲು ಲಾಠಿ ಹಿಡಿದ ಐವತ್ತು ಜನರ ತಂಡವನ್ನು ಕರೆದು ತಂದಿದ್ದ. ಅವರನ್ನು ಕಂಡು ಆಕ್ರೋಶಗೊಂಡ ತರುಣ ಹಮೀದ್ ಯಾವ ಪರಿ ಆವಾಜ್ ಹಾಕಿದನೆಂದರೆ ಎಲ್ಲ ಐವತ್ತು ಮಂದಿಯೂ ಹೇಳದೆ ಕೇಳದೆ ಜಾಗ ಖಾಲಿ ಮಾಡಿದ್ದರು. ಆಗ ಹಮೀದರ ಜೊತೆ ಇದ್ದವರು ಕೇವಲ ಮೂರು ಮಂದಿಯಷ್ಟೆ.

ಇನ್ನೊಂದು ಸಂದರ್ಭ. ಮಗಯಿ ನದಿಯಲ್ಲಿ ಪ್ರವಾಹ ಬಂದಿತ್ತು. ದಡದಲ್ಲಿ ನಿಂತು ನೋಡುತ್ತಿದ್ದ ಹಮೀದರ ಕಣ್ಣೆದುರಿನಲ್ಲಿ ನದಿಯನ್ನು ಆ ಪ್ರವಾಹದಲ್ಲಿ ದಾಟಲು ಹೋಗಿದ್ದ ಪಕ್ಕದ ಹಳ್ಳಿಯ ಇಬ್ಬರು ಹೆಂಗಸರು ಜಾರಿ ಪ್ರವಾಹದಲ್ಲಿ ಮುಳುಗತೊಡಗಿದರು. ದಡದಲ್ಲಿ ನಿಂತಿದ್ದವರು ಅಪಾಯದ ಎಚ್ಚರಿಕೆ ನೀಡುತ್ತಿದ್ದರೂ ಲೆಕ್ಕಿಸದೆ ಪ್ರವಾಹಕ್ಕೆ ಧುಮುಕಿದ ಹಮೀದ್ ಮುಳುಗಿ ನೀರು ಕುಡಿಯುತ್ತಿದ್ದ ಇಬ್ಬರೂ ಹೆಂಗಸರನ್ನು ಎತ್ತಿ ಬದುಕಿಸಿದರು. ಅಲ್ಲದೆ, ದೋಣಿಯಲ್ಲಿ ಅವರಿಬ್ಬರನ್ನೂ ಕೂರಿಸಿಕೊಂಡು ಅವರ ಹಳ್ಳಿಗೆ ಬಿಟ್ಟು ಬಂದರು.

ಪರೋಪಕಾರ ಬುದ್ಧಿ ಮತ್ತು ದೇಶದ ಬಗ್ಗೆ ಭಕ್ತಿ ಬೆಳೆಸಿಕೊಂಡಿದ್ದ ಹಮೀದ್ ಸೇವೆಯ ಅವಕಾಶಕ್ಕಾಗಿ ಚಡಪಡಿಸುತ್ತಿದ್ದರು. ತಮ್ಮ 21ನೆಯ ವಯಸ್ಸಿನಲ್ಲಿ ಮನೆಯಲ್ಲಿ ರೈಲ್ವೆಯಲ್ಲಿ ನೌಕರಿ ಮಾಡುವುದಾಗಿ ತಿಳಿಸಿ ಹೊರಟವರು ಸೇನೆಯಲ್ಲಿ ಭರ್ತಿಯಾದರು. ಅವರು ಸೇನೆಯನ್ನು ಸೇರಿಕೊಂಡದ್ದು 1954ರ ಡಿಸೆಂಬರ್ 27ರಂದು ಸೇನೆಯನ್ನು ಸೇರಿದರು. ಅವರು ಸೇರಿದ್ದು ತುಪಾಕಿ ದಳದಲ್ಲಿ ಸೇವೆಗೆ.

## 2. ತುಪಾಕಿದಳ

ತುಪಾಕಿ ದಳ ಭಾರತೀಯ ಸೇನೆಯಲ್ಲಿ ಒಂದು ಪ್ರತ್ಯೇಕ ಹೋರಾಟ ಘಟಕ. ಸೇನೆಯ ಕಾಲಾಳು ದಳ ಶತ್ರುಪಡೆಯನ್ನು ಎದುರಿಸಿ ಕೈಕೈ ಮಿಲಾಯಿಸಿ ಹೋರಾಟ ನಡೆಸುವಂತೆ ಈ ತುಪಾಕಿ ದಳ ಕೈ ಬಾಂಬುಗಳನ್ನು ಶತ್ರುಗಳ ಮೇಲೆ ಗುರಿ ಇಟ್ಟು ಎಸೆದು ನಾಶಪಡಿಸುವ ಬಲಿಷ್ಠ ಯೋಧರ ಪಡೆ. ಸೇನೆಯಲ್ಲಿ ಆಗಿರುವ ಸುಧಾರಣೆಗಳಂತೆ ತುಪಾಕಿ ದಳಕ್ಕೆ ಕೈ ಬಾಂಬುಗಳನ್ನು ಗುರಿ ಇಟ್ಟು ಎಸೆಯುವುದರಲ್ಲಿ ಮಾತ್ರವಲ್ಲದೆ ಹಿಂದಕ್ಕೆ ಚಿಮ್ಮಿ ಶತ್ರು ನೆಲೆಯನ್ನು ಧ್ವಂಸಗೊಳಿಸುವಂಥ ಬಂದೂಕುಗಳನ್ನು ಬಳಸುವುದರಲ್ಲಿಯೂ ತರಬೇತಿ ಕೊಡಲಾಗುತ್ತದೆ. ಇಂಥ ಬಂದೂಕುಗಳನ್ನು ರಿಕಾಯ್ಲ್‌ಲೆಸ್ ರೈಫಲ್‌ಗಳೆಂದು ಸೈನಿಕ ಪರಿಭಾಷೆಯಲ್ಲಿ ಕರೆಯುತ್ತಾರೆ.

ಹಿಂದಕ್ಕೆ ಗಾಳಿಯನ್ನು ಚಿಮ್ಮಿಸುವ ಮೂಲಕ ಮುಂದಿನ ಗುರಿಯತ್ತ ರಭಸವಾಗಿ ನುಗ್ಗುವಪರಿಣಾಮಕಾರಿ ಬಂದೂಕು ಇದು. ರಾಕೆಟ್ ಲಾಂಚರ್‌ನಂತೆ ವೈರಿ ಪಡೆಯನ್ನು ದೂರದಿಂದ ಧ್ವಂಸ ಮಾಡಬಲ್ಲ ಸಾಮರ್ಥ್ಯ ಈ ರೈಫಲ್‌ಗಳಿಗೆ ಇರುತ್ತದೆ. ಫಿರಂಗಿ ಗುಂಡುಗಳನ್ನು ಶತ್ರುವಿನತ್ತ ಎಸೆಯಬಲ್ಲ ಈ ರೈಫಲ್‌ಗಳನ್ನು ಬೆನ್ನಲ್ಲಿ ಹೊತ್ತು ಇಲ್ಲವೇ ಜೀಪಿನಲ್ಲಿ ನೆಲೆಗೊಳಿಸಿ ಬಳಸುವ ಕಠಿಣ ತರಬೇತಿಯನ್ನು ತುಪಾಕಿ ದಳದ ಯೋಧರಿಗೆ ನೀಡಲಾಗುತ್ತದೆ.

ಅಬ್ದುಲ್ ಹಮೀದ್ ತುಪಾಕಿ ದಳದಲ್ಲಿ ಈ ತರಬೇತಿಯನ್ನು ಪಡೆದರು. ಕೈಯಿಂದ ಮತ್ತು ರಿಕಾಯ್ಲ್‌ಲೆಸ್ ರೈಫಲ್‌ನಿಂದ ಸಿಡಿಗುಂಡೆಸೆಯುವ ಧೀರ ಯೋಧರಾದರು. ಅವರನ್ನು ತುಪಾಕಿ ದಳದ ನಾಲ್ಕನೆಯ ಪಡೆಯಲ್ಲಿ ನಿಯೋಜಿಸಲಾಯಿತು. ಯುದ್ಧ ಭೂಮಿಯಲ್ಲಿ ಪದಾತಿ ದಳಕ್ಕೆ ಪೂರಕವಾಗಿ ಈ ಪಡೆ ಕಾರ್ಯನಿರ್ವಹಿಸುತ್ತದೆ.

## 3. ಮೊದಲ ಬಡ್ತಿ

ಅಬ್ದುಲ್ ಹಮೀದ್ ಅವರನ್ನು ಪ್ರಾರಂಭಿಕ ತರಬೇತಿಯ ನಂತರ ಜಮ್ಮು ಮತ್ತು ಕಾಶ್ಮೀರಕ್ಕೆ ಕಳುಹಿಸಲಾಯಿತು. ಆ ವರ್ಷಗಳಲ್ಲಿ ಜಮ್ಮು ಕಾಶ್ಮೀರ ಗಡಿಯಲ್ಲಿ ಪಾಕಿಸ್ತಾನಿ ಸೈನಿಕರು ವೇಷ ಬದಲಿಸಿಕೊಂಡು ಗಡಿಯಲ್ಲಿ ನುಸುಳಿ ಬಂದು ಭಾರತದಲ್ಲಿ ದುಷ್ಕೃತ್ಯಗಳಲ್ಲಿ ತೊಡಗುತ್ತಿದ್ದರು. ಒಮ್ಮೆ ಅಬ್ದುಲ್ ಹಮೀದ್ ಗಡಿ ಭಾಗದಲ್ಲಿ ಕರ್ತವ್ಯದಲ್ಲಿದ್ದಾಗ ಕುಖ್ಯಾತ ಡಕಾಯಿತ ಇನಾಯತ್ ಎಂಬುವನನ್ನು ಹಿಡಿದು ಮೇಲಧಿಕಾರಿಗಳಿಗೆ ಒಪ್ಪಿಸಿದರು. ಹಮೀದರ ಈ ಸಾಹಸವನ್ನು ಪ್ರಶಂಸಿಸಲಾಯಿತು. ಅವರಿಗೆ ಲಾನ್ಸ್ ನಾಯಕ ಹುದ್ದೆಗೆ ಬಡ್ತಿ ನೀಡಲಾಯಿತು. ಅವರು 1960ರವರೆಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಇದ್ದರು.

1962ರಲ್ಲಿ ಚೀನದ ಜೊತೆ ಯುದ್ಧ ಆರಂಭವಾದಾಗ ಹಮೀದ್ ಅವರಿದ್ದ ತುಪಾಕಿ ದಳ ನೇಫಾ (ವಾಯವ್ಯ ಸರಹದ್ದು ಪ್ರದೇಶ) ವಲಯಕ್ಕೆ ತೆರಳಿತು. ಅಲ್ಲಿ ಯುದ್ಧದಲ್ಲಿ ನೇರವಾಗಿ ಭಾಗವಹಿಸುವ ಅವಕಾಶ ಮೊದಲ ಬಾರಿಗೆ ಹಮೀದ್ ಅವರಿಗೆ ಸಿಕ್ಕಿತು. ಅವರ ತುಪಾಕಿ ದಳ, ಚೀನಾ ಪಡೆಗಳೊಂದಿಗೆ ಬ್ರಿಗೇಡಿಯರ್ ಜಾನ್ ದಳವಿ ಅವರ ಕಮಾಂಡ್‌ನಲ್ಲಿ ಕಾರ್ಯನಿರ್ವಹಿಸಿದ ಏಳನೇ ಇನ್‌ಫಂಟ್ರಿ ಬ್ರಿಗೇಡ್‌ನ ಭಾಗವಾಗಿತ್ತು. ಅಸ್ಸಾಂ ರಾಜ್ಯದ ತೇಜಪುರ ನೆಲೆಯಿಂದ ದುರ್ಗಮವಾದ ಪರ್ವತ ಮಾರ್ಗದಲ್ಲಿ ಪ್ರತಿಕೂಲ ಪರಿಸ್ಥಿತಿಯಲ್ಲಿ ಮುನ್ನೂರು ಮೈಲುಗಳಷ್ಟು ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿತ್ತು.

ಚೀನ ಗಡಿಗೆ ಹೊಂದಿಕೊಂಡ ತವಾಂಗ್ ಶಿಬಿರದಿಂದ ಮುಂದೆ ಸಾಗಿ ನಮ್ಕಾ ಚು ನದಿ ಬಯಲಿನಲ್ಲಿ ಚೀನೀ ಪಡೆಯೊಂದಿಗೆ ನಡೆಸಿದ ಭೀಕರ ಹೋರಾಟದಲ್ಲಿ ಹಮೀದ್ ಅವರಿದ್ದ ತುಪಾಕಿ ದಳ ಭಾಗವಹಿಸಿತ್ತು.

ಹೋರಾಟ ಆರಂಭವಾದ ಒಂದೆರಡು ದಿನಗಳಲ್ಲಿ ಹಮೀದರಿದ್ದ ತುಪಾಕಿದಳ ಚೀನೀ ಸೈನಿಕರಿಂದ ಸುತ್ತುವರಿದಿತ್ತು. ಮೂಲನೆಲೆಯ ಸಂಪರ್ಕ ಕಡಿದು ಹೋಗಿತ್ತು. ಆದರೂ ದುರ್ಗಮವಾದ ಕಾಡುಗಳಲ್ಲಿ ಕಾಲ್ನಡಿಗೆಯಲ್ಲಿಯೇ ಭೂತಾನ ಪ್ರವೇಶಿಸಿ ಅಲ್ಲಿಂದ ಅಸ್ಸಾಂನಲ್ಲಿದ್ದ ಮಿಸಾಮಾರಿ ನೆಲೆಯನ್ನು ಪ್ರಯಾಸದಿಂದ ತಲುಪಿತ್ತು. (ಈ ಯುದ್ಧದಲ್ಲಿ ಚೀನಾದ ಕೈ ಮೇಲಾಗಿತ್ತು. ಬ್ರಿಗೇಡಿಯರ್ ಜಾನ್ ದಳವಿ ಯುದ್ಧ ಬಂದಿಯಾಗಿ ಚೀನೀ ಸೈನಿಕರಿಗೆ ಸೆರೆ ಸಿಕ್ಕಿದ್ದರು. 1962ರ ಅಕ್ಟೋಬರ್ 22ರಂದು ಅವರನ್ನು ವಶಕ್ಕೆ ಪಡೆದಿದ್ದ ಚೀನಾ ಏಳು ತಿಂಗಳ ನಂತರ, 1963ರ ಮೇ ತಿಂಗಳಲ್ಲಿ ಬಿಡುಗಡೆ ಮಾಡಿ ಭಾರತಕ್ಕೆ ಕಳುಹಿಸಿತ್ತು.)

## 4. ಕಂಪನಿ ಕ್ವಾರ್ಟರ್ ಮಾಸ್ಟರ್

ಅಬ್ದುಲ್ ಹಮೀದ್ ತುಪಾಕಿ ದಳದಲ್ಲಿ ಟ್ಯಾಂಕ್‌ಗಳನ್ನು ಎದುರಿಸುವ ಯುದ್ಧತಂತ್ರದಲ್ಲಿ ಪರಿಣತಿ ಪಡೆದಿದ್ದರು. ಜೀಪಿನ ಮೇಲೆ ನಿಂತು ಟ್ಯಾಂಕುಗಳ ಆಯಕಟ್ಟಿನ ಜಾಗಕ್ಕೆ ಗುಂಡೆಸೆಯುವ ಕೌಶಲ್ಯಕ್ಕೆ ಗುರಿಗಾರಿಕೆಯೂ ಎದೆಗಾರಿಕೆಯೂ ಬೇಕು. ಈ ವಿಭಾಗದಲ್ಲಿ ಐದು ವರ್ಷ ಸೇವೆ ಸಲ್ಲಿಸಿದ ಹಮೀದ್ ಅವರು ಹವಲ್ದಾರ್ ಹುದ್ದೆಗೆ ಬಡ್ತಿ ಪಡೆದು ತುಪಾಕಿ ದಳದ ಶಸ್ತ್ರಾಸ್ತ್ರ ಸಂಗ್ರಹದ ಉಸ್ತುವಾರಿಗೆ ನಿಯೋಜಿತರಾಗಿದ್ದರು. ಅದನ್ನು ಕಂಪನಿ ಕ್ವಾರ್ಟರ್ ಮಾಸ್ಟರ್ ಎಂದು ಕರೆಯುತ್ತಾರೆ.

ಯುದ್ಧರಂಗದಲ್ಲಿ ಹಮೀದ್ ಕಾಯಿಲ್‌ಲೆಸ್ ರೈಫಲ್ ಎಂಬ ಶಸ್ತ್ರವನ್ನು ಬಳಸುವುದರಲ್ಲಿ ನಿಷ್ಣಾತರಿದ್ದರು. ಆದ್ದರಿಂದ ಹವಲ್ದಾರ್ ಸ್ಥಾನದಲ್ಲಿದ್ದರೂ ಕಂಪೆನಿಯ ಶಸ್ತ್ರಾಸ್ತ್ರ ಉಸ್ತುವಾರಿಯ ಕ್ವಾರ್ಟರ್‌ಮಾಸ್ಟರ್ ಹೊಣೆಯಿಂದ ಹೊರಬಂದು ರೈಫಲ್ ಪಡೆಯನ್ನು ಮುನ್ನಡೆಸುವ

ಜವಾಬ್ದಾರಿಯನ್ನು ಅವರಿಗೆ ವಹಿಸಲಾಯಿತು. ಈ ಹೊಣೆಯಿಂದ ಅವರ ಆ ವೇಳೆಗೆ ಆರಂಭವಾಗಿದ್ದ ಪಾಕಿಸ್ತಾನ ವಿರುದ್ಧದ ಸಮರ ರಂಗಕ್ಕೆ ನಿಯೋಜಿತರಾದರು.

1965ರಲ್ಲಿ ಭಾರತ– ಪಾಕಿಸ್ತಾನದ ಮಧ್ಯೆ ನಡೆಯುತ್ತಿದ್ದ ಯುದ್ಧ ಭೂಮಿಗೆ ಕಾಲಿಡುವ ಮೊದಲು ಹಮೀದ್ ಅವರು ಸೇನೆಯಲ್ಲಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಜಮ್ಮು ಮತ್ತು ಕಾಶ್ಮೀರ ಗಡಿಯಲ್ಲಿ ಗಸ್ತಿನಲ್ಲಿದ್ದಾಗ ಶೌರ್ಯ ಪ್ರದರ್ಶಿಸಿದ್ದರು. ಅದಕ್ಕಾಗಿ ಸೈನ್ಯ ಸೇವಾ ಪದಕ, ಸಮರ ಸೇವಾ ಪದಕ ಮತ್ತು ರಕ್ಷಾ ಪದಕಗಳನ್ನು ಪಡೆದಿದ್ದರು. ಸ್ವಭಾವದಿಂದ ಸಾಹಸಿಯಾಗಿದ್ದ ಅವರಿಗೆ ಇಷ್ಟರಿಂದಲೇ ಸಮಾಧಾನ ಇರಲಿಲ್ಲ. ಪಾಕಿಸ್ತಾನದ ಜೊತೆ ಯುದ್ಧಕ್ಕೆ ಹೋಗುವ ಮೊದಲು ತಮ್ಮ ಸೋದರನೊಟ್ಟಿಗೆ 'ಯಾವುದೇ ಪದಕ ಪಡೆದ ಸಾಹಸಿ ಯೋಧರಿಗೆ ಪ್ಲಟೂನ್ ನಲ್ಲಿ ಭಾರಿ ಗೌರವ ಇರುತ್ತದೆ. ಈ ಸಲವಾದರೂ ಯುದ್ಧದಲ್ಲಿ ಒಂದು ಚಕ್ರವನ್ನಾದರೂ ಪಡೆದೇ ಮರಳುತ್ತೇನೆ..' ಎಂದಿದ್ದರಂತೆ.

## 5. ಪಾಕಿಸ್ತಾನದ ಜೊತೆ ಯುದ್ಧ ಏಕೆ?

ಭಾರತ ಮೂರು ಕಡೆ ಸಮುದ್ರ ಸುತ್ತುವರಿದ ಪರ್ಯಾಯ ದ್ವೀಪ. ಉತ್ತರಕ್ಕೆ ಸೋವಿಯತ್ ಒಕ್ಕೂಟ, ವಾಯವ್ಯಕ್ಕೆ ಪಾಕಿಸ್ತಾನ ಮತ್ತು ಪೂರ್ವ ಹಾಗೂ ಈಶಾನ್ಯ ದಿಕ್ಕಿನ ಗಡಿಗಳಲ್ಲಿ ಚೀನಾ, ನೇಪಾಳ, ಟಿಬೇಟ್, ಭೂತಾನ್, ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ (ಬರ್ಮಾದೇಶ) ದೇಶಗಳಿವೆ. ಯಾವುದೇ ಎರಡು ರಾಷ್ಟ್ರಗಳ ಮಧ್ಯೆ ಇರುವ ಗಡಿ ನಿರ್ಣಯದಲ್ಲಿ ತಂಟೆ ತಕರಾರುಗಳು ಸಾಮಾನ್ಯ. ಚೀನದ ಜೊತೆಗೂ ಇದ್ದ ಗಡಿಯ ತಕರಾರು 1962ರಲ್ಲಿ ಒಮ್ಮೆ ಮಾತ್ರ ಸಂಘರ್ಷಕ್ಕೆ ಎಡೆ ಕೊಟ್ಟಿತ್ತು. ಆದರೆ, ಪಾಕಿಸ್ತಾನದ ಜೊತೆಯನ್ನು ಬಿಟ್ಟು ಇತರ ದೇಶಗಳಾದ ಬಾಂಗ್ಲಾ, ಭೂತಾನ್, ನೇಪಾಳ, ಮ್ಯಾನ್ಮಾರ್ ದೇಶಗಳ ಜೊತೆ ಯಾವ ತಕರಾರೂ ಯುದ್ಧಕ್ಕೆ ಎಡೆ ಕೊಟ್ಟಿಲ್ಲ. ಗಡಿಯಲ್ಲಿ ಸಣ್ಣಪುಟ್ಟ ಘರ್ಷಣೆಗಳು ನಡೆದರೂ ಅವೆಲ್ಲ ಮಾತುಕತೆಗಳ ಮೂಲಕ ರಾಜತಾಂತ್ರಿಕ ಸಂಧಾನಗಳ ಮೂಲಕ ಶಮನಗೊಂಡಿವೆ. ಚೀನದ ಜೊತೆ ಇರುವ ಗಡಿ ವಿವಾದ ರಾಜತಾಂತ್ರಿಕ ಸಂಧಾನಗಳ ಮೂಲಕ ಬಗೆಹರಿಸುವ ಪ್ರಯತ್ನಗಳು ಮುಂದುವರಿದಿವೆ. ಆದರೆ, ಪಾಕಿಸ್ತಾನದ ಜೊತೆ ಪೂರ್ಣ ಪ್ರಮಾಣದ ಯುದ್ಧಗಳೇ ಆಗಿವೆ. ಇದರ ಹಿನ್ನೆಲೆಯನ್ನು ಇತಿಹಾಸದ ಬೆಳಕಿನಲ್ಲಿ ಗಮನಿಸಬೇಕು.

ಭಾರತಕ್ಕೆ ಸ್ವಾತಂತ್ರ್ಯ ನೀಡುವ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರ ಬಂದಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು. ಮುಸ್ಲಿಮರಿಗೆ ಪ್ರತ್ಯೇಕವಾದ ಪಾಕಿಸ್ತಾನ ಎಂಬ ತೀರ್ಮಾನವೂ ಅದೇ ವೇಳೆಗೆ ಆಗಿತ್ತು. ದೇಶದ ಎಲ್ಲ 562 ಸಂಸ್ಥಾನಗಳನ್ನು ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳಿಸಿದಾಗ ಅವು ಭಾರತ ಇಲ್ಲವೇ ಪಾಕಿಸ್ತಾನದ ಜೊತೆ ಸೇರಿಕೊಳ್ಳುವುದಕ್ಕೆ ಸ್ವತಂತ್ರ ಎಂದು ತಿಳಿಸಲಾಗಿತ್ತು. ಸಂಸ್ಥಾನದ ಅರಸರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದು ಅಂತಿಮ; ಅದನ್ನು ಯಾರೂ

ಪ್ರಶ್ನಿಸಲಾಗದು ಎಂದೂ ಹೇಳಲಾಗಿತ್ತು. ಈ ಸ್ವಾತಂತ್ರ್ಯ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ದೊರೆ ಮಹಾರಾಜ ಹರಿಸಿಂಗ್ ಅವರಿಗೆ ಮುಕ್ತವಾಗಿತ್ತು.

ಕಾಶ್ಮೀರಕ್ಕೆ ಸಂಬಂಧಿಸಿ ಕೆಲವು ಆಯ್ಕೆಗಳಿದ್ದವು. ಸಂಸ್ಥಾನವನ್ನು ಎಲ್ಲಿಗೆ ಸೇರಿಸಬೇಕು ಎಂಬುದಕ್ಕೆ ಜನತೆಯನ್ನು ಕೇಳುವ ಪ್ರಶ್ನೆ ಇರಲಿಲ್ಲ. ಅಲ್ಲಿ ಧರ್ಮದ ಪ್ರಶ್ನೆಯೂ ಇರಲಿಲ್ಲ. ಆದರೆ, ಯಾರೊಂದಿಗೆ ಸೇರಿಕೊಳ್ಳಬೇಕು ಎಂಬುದನ್ನು ಅಂತಿಮವಾಗಿ ನಿರ್ಧರಿಸಲು ಕೆಲವು ಸಮಯಾವಕಾಶ ಪಡೆದುಕೊಳ್ಳುವುದಕ್ಕೆ ಆಸ್ಪದವೂ ಇತ್ತು. ಅದನ್ನು ಸ್ಥಗಿತ ಒಪ್ಪಂದ ಎಂದು ಕರೆಯಲಾಗಿತ್ತು. ಹಾಗೆ ತತ್ಕಾಲಕ್ಕೆ ಒಪ್ಪಂದ ಮಾಡಿಕೊಂಡು ನಂತರ ಅಂತಿಮ ನಿರ್ಧಾರ ಕೈಗೊಳ್ಳಬಹುದಿತ್ತು.

ಅದರಂತೆ ಮಹಾರಾಜ ಹರಿಸಿಂಗ್ ನಿರ್ಧಾರ ತೆಗೆದುಕೊಂಡರು. ಅವರು ಪಾಕಿಸ್ತಾನದ ಜೊತೆ 'ಸ್ಥಗಿತ ಒಪ್ಪಂದ' ಮಾಡಿಕೊಂಡರು. ಆ ಮೂಲಕ ಅಂತಿಮ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಮಯಾವಕಾಶ ಪಡೆದುಕೊಂಡಿದ್ದರು. ಆದರೆ, ಆಗಿನ ಪಾಕಿಸ್ತಾನದ ಆಡಳಿತಗಾರರು ಮಹಾರಾಜ ಪಾಕಿಸ್ತಾನದ ಜೊತೆ ಸೇರಿಕೊಳ್ಳುವಂತೆ ಒತ್ತಡ ಹೇರಿದರು. ಕಾಶ್ಮೀರಕ್ಕೆ ಆಹಾರ ವಸ್ತುಗಳು, ಪೆಟ್ರೋಲ್ ಮತ್ತಿತರ ಅಗತ್ಯ ವಸ್ತುಗಳು ಪೂರೈಕೆಯನ್ನು ನಿಲ್ಲಿಸಿದರು. ಜೊತೆಗೆ ಗಡಿ ಭಾಗದ ಬುಡಕಟ್ಟು ಯುವಕರನ್ನು ಪ್ರಚೋದಿಸಿ ಜಮ್ಮು ಮತ್ತು ಕಾಶ್ಮೀರದ ಗ್ರಾಮೀಣ ಭಾಗದಲ್ಲಿ ಲೂಟಿ, ಅಪಹರಣ, ಅತ್ಯಾಚಾರ ಮೊದಲಾದ ದುಷ್ಕೃತ್ಯಗಳಿಗೆ ನೆರವಾಗತೊಡಗಿದರು.

ಪಾಕಿಸ್ತಾನದ ಬುಡಕಟ್ಟು ಪಡೆಗಳು ಕಾಶ್ಮೀರ ಮತ್ತು ಜಮ್ಮು ಸಂಸ್ಥಾನವನ್ನು ಆಕ್ರಮಿಸಿದವು. ಪಾಕಿಸ್ತಾನ ಆಕ್ರಮಣದಿಂದ ತತ್ತರಿಸಿದ ಕಾಶ್ಮೀರದ ಮಹಾರಾಜ ಸಂಸ್ಥಾನವನ್ನು ಭಾರತ ಒಕ್ಕೂಟದ ಜೊತೆ ವಿಲೀನಗೊಳಿಸಲು ಭಾರತ ಸರ್ಕಾರದ ಜೊತೆ ಒಪ್ಪಂದಕ್ಕೆ ಬಂದು ಸಹಿ ಹಾಕಿದ. ಪಾಕಿಸ್ತಾನದ ಪಡೆಗಳನ್ನು ಭಾರತ ಎದುರಿಸಿತು. ದೇಶಕ್ಕೆ ಸ್ವಾತಂತ್ರ್ಯ ಗಳಿಸಿದ ಮೂರೇ ತಿಂಗಳಲ್ಲಿ, 1947ರ ಅಕ್ಟೋಬರ್‌ನಲ್ಲಿ ಆರಂಭವಾದ ಈ ಯುದ್ದವನ್ನು ಮೊದಲ ಕಾಶ್ಮೀರ ಸಮರ ಎಂದು ಕರೆಯಲಾಗುತ್ತಿದೆ. ಪಾಕಿಸ್ತಾನದ ಆಕ್ರಮಣದಿಂದ ಉಂಟಾದ ಈ ಬಿಕ್ಕಟ್ಟು ನಿವಾರಣೆಗೆ ಭಾರತ ವಿಶ್ವಸಂಸ್ಥೆಯ ಮಧ್ಯಸ್ಥಿಕೆಯನ್ನು ಕೋರಿತು. ವಿಶ್ವಸಂಸ್ಥೆಯ ಭದ್ರತಾ ಮಂಡಲಿ ಈ ಕುರಿತು 1948ರ ಏಪ್ರಿಲ್ 21 ರಂದು ನಿರ್ಣಯ ಅಂಗೀಕರಿಸಿತು. ಅದೇ ವರ್ಷದ ಡಿಸೆಂಬರ್‌ನಲ್ಲಿ ಯುದ್ಧ ಕೊನೆಯಾಯಿತು. ಆ ವೇಳೆಗೆ ಕಾಶ್ಮೀರ ಮತ್ತು ಜಮ್ಮು ಸಂಸ್ಥಾನದ ಉತ್ತರ ಮತ್ತು ಪಶ್ಚಿಮ ಭಾಗಗಳ ಮೇಲೆ ಪಾಕಿಸ್ತಾನ ನಿಯಂತ್ರಣ ಹೊಂದಿತ್ತು. ಸಂಸ್ಥಾನದ ದಕ್ಷಿಣ, ಕೇಂದ್ರ ಮತ್ತು ವಾಯವ್ಯ ಪ್ರದೇಶಗಳು ಭಾರತದ ನಿಯಂತ್ರಣದಲ್ಲಿದ್ದವು. ಎರಡೂ ದೇಶಗಳು ಸ್ವಾಧೀನಪಡಿಸಿಕೊಂಡಿದ್ದ ಪ್ರದೇಶಗಳ ಮಧ್ಯೆ ಗಡಿ ನಿಯಂತ್ರಣ ರೇಖೆಯನ್ನು ಗುರುತಿಸಿ ಸಮಸ್ಯೆಯನ್ನು ತತ್ಕಾಲಕ್ಕೆ ಉಪಶಮನಗೊಳಿಸಲಾಯಿತು.

ಪಾಕಿಸ್ತಾನ ಸ್ವತಂತ್ರವಾದ ತಕ್ಷಣ ಭಾರತದಂತೆ ಪ್ರಜಾಸತ್ತೆಯ ಬೇರುಗಳನ್ನು ದೃಢಪಡಿಸಿಕೊಳ್ಳಲು ಪ್ರಯತ್ನ ನಡೆಸಲಿಲ್ಲ. ಭಾರತ 1952ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಯನ್ನು ನಡೆಸಿ ಸಂಸದೀಯ ಪ್ರಜಾಸತ್ತೆಗೆ ಬಲವಾದ ಬುನಾದಿಯನ್ನು ಆರಂಭಿಸಿತ್ತು. ಆದರೆ, ಪಾಕಿಸ್ತಾನದ ರಾಜಕೀಯ ವ್ಯವಸ್ಥೆ ಬ್ರಿಟಿಷರಿಂದ ಸಂಪೂರ್ಣ ಬಿಡುಗಡೆ ಆಗಲು ಬಯಸಲಿಲ್ಲ. ಪಾಕಿಸ್ತಾನದ ಅಸ್ತಿತ್ವಕ್ಕೆ ಹೋರಾಟ ನಡೆಸಿದ್ದ ಮುಸ್ಲಿಂ ಲೀಗ್ ಅಧ್ಯಕ್ಷ ಮಹಮದ್ ಅಲಿ ಜಿನ್ನಾ ನೂತನ ರಾಷ್ಟ್ರದ ಮೊದಲ ಗವರ್ನರ್ ಜನರಲ್ ಆದರು. ಮುಸ್ಲಿಂ ಲೀಗ್ ಮಹಾಕಾರ್ಯದರ್ಶಿ ಆಗಿದ್ದ ನವಾಬ್‌ಜಾದಾ ಲಿಯಾಖತ್ ಅಲಿಖಾನ್ ದೇಶದ ಮೊದಲ ಪ್ರಧಾನಿ ಆದರು. ಜೊತೆಗೆ ಪಾಕಿಸ್ತಾನ ಕಾಮನ್‌ವೆಲ್ತ್ ದೇಶಗಳ ಕೂಟದ ಆಧಿಪತ್ಯದಲ್ಲಿ ಉಳಿದುಕೊಂಡಿತು. ಅದರಂತೆ ಆರನೇ ಕಿಂಗ್ ಜಾರ್ಜ್ ಪಾಕಿಸ್ತಾನದ ಚಕ್ರವರ್ತಿಯಾದರು. 1952ರ ಫೆಬ್ರುವರಿ 6 ರಂದು ಕಿಂಗ್ ಜಾರ್ಜ್ ನಿಧನರಾದರು. ಆ ನಂತರ ರಾಣಿ ಎರಡನೇ ಎಲಿಜಬೆತ್ ಬ್ರಿಟಿಷ್ ಅರಸೊತ್ತಿಗೆಯ ಚುಕ್ಕಾಣಿ ಹಿಡಿದಾಗ ಅವರು ಪಾಕಿಸ್ತಾನಕ್ಕೂ ಚಕ್ರವರ್ತಿನಿಯಾದರು. 1956ರಲ್ಲಿ ಪಾಕಿಸ್ತಾನ ಇಸ್ಲಾಮಿಕ್ ಗಣರಾಜ್ಯವಾಗಿ ಘೋಷಣೆ ಮಾಡಿಕೊಂಡು ಬ್ರಿಟಿಷ್ ಅರಸೊತ್ತಿಗೆಯಿಂದ ಹೊರಬಂದಿತು.

ಇಸ್ಲಾಮಿಕ್ ಸಂಸದೀಯ ಪ್ರಜಾಸತ್ತೆಯಾಗಿ ರೂಪುಗೊಂಡಾಗ ಅದುವರೆಗೆ ಇದ್ದ ಗವರ್ನರ್ ಜನರಲ್ ಹುದ್ದೆ ರಾಷ್ಟ್ರದ ಅಧ್ಯಕ್ಷ ಹುದ್ದೆಯಾಗಿ ಪರಿವರ್ತನೆಯಾಯಿತು. ಇಸ್ಕಂದರ್ ಮಿರ್ಜಾ ದೇಶದ ಮೊದಲ ಅಧ್ಯಕ್ಷರಾದರು. ಎರಡು ವರ್ಷಗಳ ನಂತರ 1958ರಲ್ಲಿ ಅಧ್ಯಕ್ಷ ಮಿರ್ಜಾ ಚುನಾಯಿತ ಸಂಸತ್ತನ್ನು ವಿಸರ್ಜಿಸಿ ಪ್ರಧಾನಿ ಫಿರೋಜ್ ಖಾನ್ ನೂನ್ ಅವರ ಸರ್ಕಾರವನ್ನು ವಜಾಗೊಳಿಸಿದರು. ಸೇನೆಯ ಮಹಾದಂಡನಾಯಕರಾಗಿದ್ದ ಜನರಲ್ ಅಯೂಬ್ ಖಾನ್ ಅವರನ್ನು ಸೇನಾಡಳಿತದ ಮುಖ್ಯಸ್ಥರನ್ನಾಗಿ ನೇಮಿಸಿದರು. ಹದಿಮೂರು ದಿನಗಳ ನಂತರ ಜನರಲ್ ಅಯೂಬ್ ಖಾನ್ ಕ್ಷಿಪ್ರಕ್ರಾಂತಿ ನಡೆಸಿ ಅಧ್ಯಕ್ಷ ಮಿರ್ಜಾರನ್ನೇ ಪದಚ್ಯುತಗೊಳಿಸಿದರು. ರಾಷ್ಟ್ರದ ಅಧ್ಯಕ್ಷ ಸ್ಥಾನಕ್ಕೆ ತಮ್ಮನ್ನೇ ಘೋಷಿಸಿಕೊಂಡರು. ಸ್ವಾತಂತ್ರ್ಯ ಗಳಿಸಿದ ಮೊದಲ ದಶಕದಲ್ಲಿಯೇ ಆಡಳಿತದಲ್ಲಿ ಅಸ್ಥಿರತೆ ತಲೆದೋರಿತು. ಚುನಾಯಿತ ನಾಗರಿಕ ಸರ್ಕಾರ ಸಂಸದೀಯ ಪ್ರಜಾಪ್ರಭುತ್ವವನ್ನು ದೃಢವಾಗಿಸುವುದಕ್ಕೆ ಅವಕಾಶ ಆಗಲಿಲ್ಲ. ಸೈನ್ಯಾಧಿಕಾರಿಗಳು ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಿದರು. ಇದರಿಂದ ಭಾರತದ ಜೊತೆ ಸಂಬಂಧ ಶಾಂತಿಯುತವಾಗಿ ಬೆಳೆಯುವುದಕ್ಕೆ ಆಸ್ಪದವಾಗಲಿಲ್ಲ. ಹೊಸದಾಗಿ ಪಡೆದ ರಾಜಕೀಯ ಸ್ವಾತಂತ್ರ್ಯವನ್ನು ದೇಶ ಕಟ್ಟುವುದಕ್ಕೆ ಬಳಸುವುದಕ್ಕೆ ಬದಲಾಗಿ ಭಾರತದ ಜೊತೆ ಪೈಪೋಟಿ ನಡೆಸುವುದಕ್ಕೆ ಬಳಸಿದರು. ದೇಶದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕಿಂತ ಕಾಶ್ಮೀರದ ಸಮಸ್ಯೆಯನ್ನು ಮುಂದಿಟ್ಟುಕೊಂಡ ಪಾಕಿಸ್ತಾನದ ಮಿಲಿಟರಿ ಆಡಳಿತ ಭಾರತದ ವಿರುದ್ಧ ದ್ವೇಷ ಭಾವನೆಯನ್ನು ಜೀವಂತ ಉಳಿಸಿಕೊಂಡಿತು. ಭಾರತದ ಜೊತೆ ಸಂಘರ್ಷಕ್ಕೆ ಕಾಶ್ಮೀರದ ಸಮಸ್ಯೆಯನ್ನು ನೆಪವಾಗಿರಿಸಿಕೊಂಡಿತು. ಸ್ವತಂತ್ರವಾದ ಆರು ದಶಕಗಳ ನಂತರವೂ ಈ ಪ್ರಶ್ನೆ ಇತ್ಯರ್ಥವಾಗಿಲ್ಲ.

## 6. ಹಮೀದ್ ಪರಮವೀರ ಸಾಹಸ

ಜಮ್ಮು ಮತ್ತು ಕಾಶ್ಮೀರದಲ್ಲಿ ತನ್ನ ಪಡೆಗಳನ್ನು ನುಗ್ಗಿಸಿ ಭಾರತದ ಆಡಳಿತದ ವಿರುದ್ಧ ದಂಗೆ ಎಬ್ಬಿಸುವ ಪಾಕಿಸ್ತಾನದ ದುಷ್ಟ ತಂತ್ರ 1965ರಲ್ಲಿ ಎರಡೂ ದೇಶಗಳ ಮಧ್ಯೆ ಉಗ್ರ ಹೋರಾಟಕ್ಕೆ ನೆಪವಾಯಿತು. ಅದು ಐದು ವಾರಗಳ ಕಾಲ ನಡೆದ ಯುದ್ಧ. ಪಾಕಿಸ್ತಾನ ಅಮೆರಿಕದಿಂದ ಪಡೆದ ಅತ್ಯಾಧುನಿಕ ಯುದ್ಧ ಟ್ಯಾಂಕ್‌ಗಳ ನೆರವಿನಿಂದ ಆಕ್ರಮಣವನ್ನು ಆರಂಭಿಸಿತು. ಸಾಬರ್ ಜೆಟ್ ಎಂಬ ಆಧುನಿಕ ಯುದ್ಧ ವಿಮಾನಗಳು ಪಾಕಿಸ್ತಾನದ ವೈಮಾನಿಕ ದಳದ ಬಲವನ್ನು ಹೆಚ್ಚಿಸಿದ್ದವು. ಈ ಆಕ್ರಮಣವನ್ನು 'ಆಪರೇಷನ್ ಗಿಬ್ರಾಲ್ಟರ್' ಎಂದು ಪಾಕಿಸ್ತಾನ ಬಣ್ಣಿಸಿಕೊಂಡಿತ್ತು. ಅದಕ್ಕೆ ಭಾರತವೂ ಬ್ರಿಟನ್ ನಿರ್ಮಿತ ಸೆಂಚ್ಯುರಿಯನ್ ಟ್ಯಾಂಕ್ ಮತ್ತು ದೇಶೀ ನಿರ್ಮಿತ ನ್ಯಾಟ್ ವಿಮಾನಗಳಿಂದ ಸನ್ನದ್ಧವಾಯಿತು.

ಪಾಕಿಸ್ತಾನಿ ಪಡೆ ರಾಜಸ್ತಾನದ ಕಛ್ ಮರುಭೂಮಿ ಪ್ರದೇಶದಲ್ಲಿ ಅತಿಕ್ರಮಣ ನಡೆಸಿ ಮುಂದೆ ಬಂದಿತು. ಲಾಹೋರ್‌ಗೆ ಸನಿಹದಲ್ಲಿ ಪಂಜಾಬ್ ಗಡಿ ಭಾಗದ ಪ್ರಮುಖ ಪಟ್ಟಣಗಳನ್ನು ವಶಪಡಿಸಿಕೊಳ್ಳುವ ತಂತ್ರವನ್ನು ಒಂದೆಡೆ ಅನುಸರಿಸಿತು. ಇನ್ನೊಂದಡೆ ಜಮ್ಮುವಿನ ಅಕನೂರ್ ಪ್ರದೇಶವನ್ನು ವಶಪಡಿಸಿಕೊಳ್ಳಲು ಮುಂದಾಯಿತು. ಜಮ್ಮು ಕಾಶ್ಮೀರ ಗಡಿಯಲ್ಲಿದ್ದ ಭಾರತೀಯ ಯೋಧರಿಗೆ ಆಹಾರ ಸಾಮಗ್ರಿಗಳ ಸರಬರಾಜನ್ನು ಸ್ಥಗಿತಗೊಳಿಸಿ ಸಂಪರ್ಕ ಕಡಿತ ಮಾಡುವುದು ವೈರಿ ಪಡೆಯ ಹುನ್ನಾರವಾಗಿತ್ತು.

ಇದು ಲಾಹೋರ್ ಸೆಕ್ಟರ್ ಎಂದು ಗುರುತಿಸಿದ ಪ್ರದೇಶ. ಪಂಜಾಬಿನ ಗಡಿಯಿಂದ ಆಕ್ರಮಣ ಆರಂಭಿಸಿದ ಪಾಕಿಸ್ತಾನದ ಸೇನೆ ಅಮೃತಸರದತ್ತ ಮುನ್ನಡೆಯುವ ಸಂಚಿನಲ್ಲಿತ್ತು. ಯುದ್ಧ ಆರಂಭವಾಗಿ ನಾಲ್ಕು ವಾರಗಳಲ್ಲಿ ವೈರಿಪಡೆ ಗಡಿಯಿಂದ 8 ಕಿಲೋಮೀಟರ್ ದೂರದಲ್ಲಿದ್ದ ಖೇಮ್‌ಕರಣ್ ಪಟ್ಟಣದ ಮೇಲೆ ನಿಯಂತ್ರಣ ಸಾಧಿಸಿತ್ತು. ಅದನ್ನು ಎದುರಿಸುವುದಕ್ಕೆ ಭಾರತೀಯ ಸೇನೆಯ ನಾಲ್ಕನೇ ಗ್ರೆನೇಡಿಯರ್ ಪಡೆಯನ್ನು ಖೇಮ್‌ಕರಣ್ ರಸ್ತೆಯಲ್ಲಿನ ಆಯಕಟ್ಟಿನ ಚೀಮಾ ಗ್ರಾಮದಲ್ಲಿ ನಿಯೋಜಿಸಲಾಗಿತ್ತು. ಅದು ತರನ್ ತರನ್ ಜಿಲ್ಲೆಯ ಗಡಿ ಭಾಗ. ಈ ಪ್ರದೇಶದ ಮೇಲಣ ಹಿಡಿತವನ್ನು ದೃಢಪಡಿಸುವುದು ರಕ್ಷಣಾ ತಂತ್ರದ ದೃಷ್ಟಿಯಿಂದ ಅತ್ಯಂತ ಮುಖ್ಯವಾಗಿತ್ತು.

ಲಾಹೋರ್ ಸೆಕ್ಟರ್ ಕಡೆಯ ಕಾರ್ಯಾಚರಣೆಯಲ್ಲಿ ಭಾರತ ಸೇನೆಯ ನಾಲ್ಕನೇ ಗುಡ್ಡಗಾಡು ದಳ ಇಚ್ಛೋಗಿಲ್ ನಾಲೆಯ ಬಳಿ ಪಾಕ್ ಸೇನೆಯ ಪ್ರತಿದಾಳಿಯಲ್ಲಿ ಹಿಂದೆ ಸರಿದು ಖೇಮ್‌ಕರಣ್ ಪ್ರದೇಶಕ್ಕೆ ಹಿಂದಿರುಗಬೇಕಾಯಿತು. ತಕ್ಷಣ ರೂಪಿಸಿದ ಯುದ್ಧ ತಂತ್ರದ ಪ್ರಕಾರ ತುಪಾಕಿ ದಳದ ನಾಲ್ಕನೇ ತುಕಡಿ, ಇತರ ಮೂರು ತುಕಡಿಗಳೊಂದಿಗೆ ಅಸಲ್ ಉತ್ತರ್ ಮತ್ತು ಚೀಮಾ ಗ್ರಾಮಗಳ ಮಧ್ಯದ ಪ್ರದೇಶವನ್ನು ರಕ್ಷಿಸಿಕೊಳ್ಳುವುದಕ್ಕೆ ನಿಯೋಜಿತವಾದವು. ಇದು ಖೇಮ್‌ಕರಣ್–ಬಿಕ್ವಿಂಡ್–

ಅಮೃತಸರ ಹೆದ್ದಾರಿಗುಂಟ ಸಾಗಿದ್ದ ರಕ್ಷಣಾ ವ್ಯೂಹ. ಅಬ್ದುಲ್ ಹಮೀದ್ ಇದ್ದ ನಾಲ್ಕನೇ ಪದಾತಿದಳ ಚೀಮಾ ಗ್ರಾಮದ ಉತ್ತರ ಭಾಗದಲ್ಲಿ ಕಾರ್ಯೋನ್ಮುಖವಾಯಿತು. ಅದರ ದಕ್ಷಿಣಕ್ಕೆ ಇತರ ಮೂರು ತುಕಡಿಗಳು ನೆಲೆ ನಿಂತವು. ಅಸಲ್ ಉತ್ತರ್ ಭಾಗದಲ್ಲಿ ಏಳನೇ ಗ್ರೆನೇಡಿಯರ್ ತುಕಡಿ ಸನ್ನದ್ಧವಾಯಿತು. 'ಅಸಲ್ ಉತ್ತರ್' ಎಂಬುದು ಪಾಕಿಸ್ತಾನದ ಆಕ್ರಮಣಕ್ಕೆ ದಿಟ್ಟ ಉತ್ತರ ಎಂಬರ್ಥದ ಗೂಢ ಸಂಕೇತವಾಗಿದ್ದು ಯುದ್ಧ ಭೂಮಿಗೆ ಭಾರತ ನೀಡಿದ ಹೆಸರಾಗಿತ್ತು.

1965ರ ಸೆಪ್ಟೆಂಬರ್ ಮೊದಲ ವಾರವೇ ಇಚ್ಛೋಗಿಲ್ ನಾಲೆಯನ್ನು ವಶಪಡಿಸಿಕೊಳ್ಳುವ ಗುರಿ ಇಟ್ಟುಕೊಳ್ಳಲಾಗಿತ್ತು. ಭಾರತೀಯ ಪಡೆಗಳು ಮುನ್ನುಗ್ಗಿ ಇಚ್ಛೋಗಿಲ್ ನಾಲೆಯನ್ನು ವಶಕ್ಕೆ ತೆಗೆದುಕೊಂಡವು. ಆದರೆ ಪ್ರತಿಯಾಗಿ ಪಾಕ್ ಪಡೆಗಳು ಮುನ್ನುಗ್ಗಿದ ಕಾರಣ ಆಯಕಟ್ಟಿನ ಜಾಗಕ್ಕೆ ಸರಿದವು. ಎರಡೂ ಕಡೆ ಗುಂಡಿನ ದಾಳಿ ಮುಂದುವರಿಯಿತು. ವಶಪಡಿಸಿಕೊಂಡ ಪ್ರದೇಶವನ್ನು ರಕ್ಷಿಸಿಕೊಳ್ಳುವ ತಂತ್ರವಾಗಿ ಕಂದಕಗಳನ್ನು ತೆಗೆದು ಮದ್ದುಗುಂಡು ಶೇಖರಿಸುವ ಪ್ರಕ್ರಿಯೆಯೂ ನಡೆಯಿತು. ಭಾರತೀಯ ಪಡೆಗಳು ವಶಪಡಿಸಿಕೊಂಡು ರಕ್ಷಿಸುತ್ತಿದ್ದ ಪ್ರದೇಶ ಹತ್ತಿ ಮತ್ತು ಕಬ್ಬು ಬೆಳೆದು ನಿಂತಿದ್ದ ಹೊಲಗದ್ದೆಗಳು. ಆದ್ದರಿಂದ ಆಯಕಟ್ಟಿನ ಸ್ಥಳ ಹಿಡಿದು ವೈರಿ ಪಡೆಯನ್ನು ಎದುರಿಸಲು ಸಜ್ಜಾಗಿತ್ತು.

ಸೆಪ್ಟೆಂಬರ್ 8ರಂದು ವೈರಿ ಪಡೆ ಅಬ್ದುಲ್ ಹಮೀದ್ ಅವರಿದ್ದ ನಾಲ್ಕನೇ ಗ್ರೆನೇಡಿಯರ್ ತುಪಾಕಿ ದಳ ನಿರ್ಮಿಸಿಕೊಂಡಿದ್ದ ರಕ್ಷಣಾ ನೆಲೆಯನ್ನು ಭೇದಿಸಲು ಸತತವಾಗಿ ದಾಳಿ ನಡೆಸಿತ್ತು. ಟ್ಯಾಂಕ್‌ಗಳಿಂದ ನಡೆಸುತ್ತಿದ್ದ ದಾಳಿ ಎಷ್ಟು ಘೋರವಾಗಿತ್ತೆಂದರೆ ಅಲ್ಲಿ ಹಾರಿಸುತ್ತಿದ್ದ ಗುಂಡುಗಳಿಂದ ಆ ಪ್ರದೇಶವೆಲ್ಲ ಛಿದ್ರ ಛಿದ್ರವಾಗಿತ್ತು. ಹಮೀದ್ ಕಂಪೆನಿಯ ಸಹಾಯಕ ಅಧಿಕಾರಿಗಳಾಗಿದ್ದ ಲೆಫ್ಟಿನೆಂಟ್ ಎಚ್.ಆರ್. ಜುಹ್ನು ಮತ್ತು ಸೆಕೆಂಡ್ ಲೆಫ್ಟಿನೆಂಟ್ ವಿ.ಕೆ.ವೈದ ಇಬ್ಬರೂ ಶತ್ರು ಪಡೆಯ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದರು. ರಿಕಾಯ್ಲ್‌ಲೆಸ್ ರೈಪಲ್ ದಳದ ನಾಯಕರಾಗಿದ್ದ ಹಮೀದ್ ಮುನ್ನುಗ್ಗಿ ಶತ್ರುಪಡೆಯ ಟ್ಯಾಂಕುಗಳತ್ತ ಧಾವಿಸಿದ್ದರು. ಅಂದು ಮಧ್ಯಾಹ್ನವೇ ಹವಲ್ದಾರ್ ಹಮೀದ್ ಶತ್ರುಪಡೆಯ ಮೂರು ಪ್ಯಾಟನ್ ಟ್ಯಾಂಕುಗಳನ್ನು ನಾಶಪಡಿಸಿದ್ದರು.

ಸೆಪ್ಟೆಂಬರ್ 10ರಂದು ಬೆಳಗ್ಗೆ ಎಂಟು ಗಂಟೆಗೆ ಪ್ಯಾಟನ್ ಟ್ಯಾಂಕುಗಳಿಂದ ಸನ್ನದ್ಧವಾಗಿದ್ದ ಪಾಕಿಸ್ತಾನಿ ಪಡೆ ಭಾರತದ ನಾಲ್ಕನೇ ಗ್ರೆನೇಡಿಯರ್ ತುಕಡಿಯ ರಕ್ಷಣಾ ವ್ಯೂಹವನ್ನು ಛಿದ್ರಗೊಳಿಸಲು ಆಕ್ರಮಣ ಆರಂಭಿಸಿತು. ಆದರೆ, ರಹಸ್ಯವಾಗಿದ್ದ ರಕ್ಷಣಾ ನೆಲೆಯನ್ನು ಪತ್ತೆ ಮಾಡಲು ಅದಕ್ಕೆ ಸಾಧ್ಯವಾಗಲಿಲ್ಲ. ಆದರೆ, ಹಮೀದ್ ತಂಡವಿದ್ದ ದಿಕ್ಕಿನತ್ತ ಸ್ಫೋಟಕಗಳನ್ನು ಸಿಡಿಸುತ್ತಾ ಗುಂಡಿನ ದಾಳಿಯನ್ನು ಮುಂದುವರಿಸಿತು. ತುಪಾಕಿ ದಳ ನಿರ್ಮಿಸಿಕೊಂಡಿದ್ದ ಕಂದಕಗಳ ಸುರಕ್ಷತಾ ಸ್ಥಳದತ್ತ ಬೆಳಗಿನ ಒಂಬತ್ತರ ಸುಮಾರಿಗೆ ಪಾಕಿಸ್ತಾನದ ಪ್ಯಾಟನ್ ಟ್ಯಾಂಕುಗಳು ಮುನ್ನುಗ್ಗತೊಡಗಿದವು. ಅದನ್ನು ಕಂಡ ಹಮೀದ್ ಸಿಡಿದು ಬರುತ್ತಿದ್ದ ಶತ್ರುಪಡೆಯ ಗುಂಡಿನ ದಾಳಿಯನ್ನು ಲೆಕ್ಕಿಸದೆ ಜೀಪಿನಲ್ಲಿ ತಮ್ಮ ರಿಕಾಯ್ಲ್‌ಲೆಸ್ ರೈಫಲ್ ಹಿಡಿದು ಮುನ್ನುಗ್ಗಿದರು. ಬರುತ್ತಿದ್ದ ಟ್ಯಾಂಕ್‌ಗಳ ಮುಂಚೂಣಿಯಲ್ಲಿದ್ದ

ನಾಯಕನಿಗೆ ಮೊದಲು ಗುಂಡಿಕ್ಕಿ ಉರುಳಿಸಿದರು. ನಂತರ ಮೂರು ಪ್ಯಾಟನ್ ಟ್ಯಾಂಕುಗಳನ್ನು ಒಂದಾದ ಮೇಲೆ ಒಂದರಂತೆ ಧ್ವಂಸಗೊಳಿಸಿದರು. ತಮ್ಮ ಟ್ಯಾಂಕುಗಳು ಹಮೀದ್ ಆಕ್ರಮಣಕ್ಕೆ ಗುರಿಯಾಗಿ ಹೊತ್ತಿ ಉರಿಯುತ್ತಾ ನಿಷ್ಕ್ರಿಯವಾಗುತ್ತಾ  ಇದ್ದುದನ್ನು ಕಂಡ ಪಾಕಿಸ್ತಾನಿ ಪಡೆ ಅದಕ್ಕೆ ಕಾರಣರಾದ ಹಮೀದ್ ಅವರನ್ನು ಗುರುತಿಸಿ ಅವರತ್ತ ಟ್ಯಾಂಕ್ ಮತ್ತು ಫಿರಂಗಿಗಳಿಂದ ದಾಳಿ ನಡೆಸಿದರು. ಚಕ್ರವ್ಯೂಹದಲ್ಲಿ ಸಿಲುಕಿದಂತೆ ಶತ್ರುಪಡೆಗಳಿಂದ ಸುತ್ತುವರಿದಿದ್ದರೂ ವೀರ ಹಮೀದ್ ನಾಲ್ಕನೆಯ ಟ್ಯಾಂಕ್‌ಗೆ ಗುರಿ ಇಟ್ಟು ಗುಂಡು ಎಸೆಯುತ್ತಿದ್ದಂತೆಯೇ ಅವರಿದ್ದ ಜೀಪಿನ ಮೇಲೆ ಶತ್ರುಪಡೆ ಗುಂಡಿಕ್ಕಿತು.

ಹಮೀದ್ ಅವರ ಕೆಚ್ಚಿನ ಹೋರಾಟದಿಂದ ಉತ್ತೇಜಿತವಾದ ಭಾರತೀಯ ಪಡೆ ಇನ್ನಿಲ್ಲದ ಹುರುಪಿನಿಂದ ಪಾಕಿಸ್ತಾನಿ ಪಡೆಗಳ ಮೇಲೆ ಮುಗಿಬಿದ್ದಿತು. ಭಾರತೀಯ ಯೋಧರ ಉಗ್ರ ದಾಳಿಯಿಂದ ಭಾರೀ ಸಂಖ್ಯೆಯ ಟ್ಯಾಂಕ್‌ಗಳನ್ನು ಕಳೆದುಕೊಂಡಿದ್ದ ಪಾಕಿಸ್ತಾನಿ ಪಡೆ ಹೋರಾಟದಿಂದ ಹಿಂದೆ ಸರಿಯಿತು. ಭಾರತೀಯ ಪಡೆಗಳ ಉಗ್ರದಾಳಿ ಎಷ್ಟು ಬಿರುಸಾಗಿತ್ತೆಂದರೆ ಶತ್ರುಗಳು ಎಷ್ಟೋ ಟ್ಯಾಂಕುಗಳನ್ನು ಅವು ಚಾಲನಾ ಸ್ಥಿತಿಯಲ್ಲಿದ್ದಾಗಲೇ ಬಿಟ್ಟು ಪರಾರಿಯಾಗಿದ್ದರು. ಅಂತರರಾಷ್ಟ್ರೀಯ ಗಡಿ ರೇಖೆಗೆ ಐದು ಕಿಲೋಮೀಟರ್ ದೂರವಿದ್ದ ಖೇಮ್‌ಕರಣ್ ಪಟ್ಟಣವನ್ನು ದಾಟಿ ಅಮೃತಸರವನ್ನು ವಶಪಡಿಸಿಕೊಳ್ಳಲು ಬಂದಿದ್ದ ಪಾಕಿಸ್ತಾನ ಪಡೆ ಟ್ಯಾಂಕುಗಳನ್ನೂ ಸೇನಾ ವಾಹನಗಳನ್ನೂ ಬಿಟ್ಟು ಗಡಿಯಿಂದ ಆಚೆ ಓಡಿ ಹೋಗಿತ್ತು. 'ಅಸಲ್ ಉತ್ತರ್' ಪ್ರದೇಶವೊಂದರಲ್ಲಿಯೇ 97 ಪಾಕಿಸ್ತಾನಿ ಟ್ಯಾಂಕುಗಳನ್ನು ಭಾರತೀಯ ಪಡೆಗಳು ವಶಕ್ಕೆ ಪಡೆದವು. ಅತ್ಯಾಧುನಿಕ ಶಸ್ತ್ರಗಳಿಂದ ಸನ್ನದ್ಧವಾಗಿದ್ದ ಟ್ಯಾಂಕುಗಳನ್ನು ಮುಂದಿಟ್ಟುಕೊಂಡು ಆವೇಶದಿಂದ ಮುನ್ನುಗ್ಗಿ ಬಂದಿದ್ದ ಶತ್ರುಪಡೆ ಹಮೀದ್ ಅವರಂಥ ಭಾರತೀಯ ಯೋಧರ ಕೆಚ್ಚಿನ ಹೋರಾಟದ ಎದುರು ನಿಲ್ಲಲಾಗದೆ ಪರಾರಿಯಾಯಿತು.

ಹಮೀದ್ ಅವರು ಮೆರೆದ ಶೌರ್ಯವೇ ಐದು ವಾರಗಳಿಂದ ನಡೆಯುತ್ತಿದ್ದ ಯುದ್ಧಕ್ಕೆ ನಿರ್ಣಾಯಕವಾಯಿತು. ಆದರೆ, ಯುದ್ಧದಲ್ಲಿ ಭಾರತದ ವಿಜಯವನ್ನು ಆಚರಿಸಲು ವೀರ ಯೋಧ ಅಬ್ದುಲ್ ಹಮೀದ್ ಉಳಿಯಲಿಲ್ಲ.

ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು ಅಸಾಧಾರಣ ಶೌರ್ಯ ಸಾಹಸ ಪ್ರದರ್ಶಿಸಿದ ಹವಲ್ದಾರ್ ಅಬ್ದುಲ್ ಹಮೀದ್ ಅವರಿಗೆ ಒಂದೇ ವಾರದಲ್ಲಿ (ಸೆಪ್ಟೆಂಬರ್ 16ರಂದು) ಅತ್ಯುನ್ನತ ಶೌರ್ಯ ಪ್ರಶಸ್ತಿ 'ಪರಮವೀರಚಕ್ರ'ವನ್ನು ಭಾರತ ಸರ್ಕಾರ ಘೋಷಿಸಿತು.

1966ರ ಗಣರಾಜ್ಯ ದಿನದಂದು ರಾಷ್ಟ್ರಪತಿ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರು ಹಮೀದ್ ಅವರ ಪತ್ನಿ ರಸೂಲನ್ ಬೀಬಿ ಅವರಿಗೆ ಪರಮವೀರ ಚಕ್ರ ಪ್ರಶಸ್ತಿಯನ್ನು ಪ್ರದಾನ ಮಾಡಿ ವೀರ ಯೋಧನಿಗೆ ದೇಶದ ಕೃತಜ್ಞತೆಯನ್ನು ಸಲ್ಲಿಸಿದರು.

* * *

## 7. ಪರಮವೀರ ಚಕ್ರ ಪ್ರಶಸ್ತಿಫಲಕದಲ್ಲಿ ಬರೆದ ಬರಹ

## **ಕಂಪೆನಿ ಕ್ವಾರ್ಟರ್‌ಮಾಸ್ಟರ್ ಹವಲ್ದಾರ್ ಅಬ್ದುಲ್ ಹಮೀದ್**

## **4ನೇ ಗ್ರೆನೇಡಿಯರ್ (ನಂ.2639985)**

*1965ರ ಸೆಪ್ಟೆಂಬರ್ 10 ರಂದು ನಸುಕಿನ 8 ಗಂಟೆಗೆ ಪ್ಯಾಟನ್ ಟ್ಯಾಂಕುಗಳೊಂದಿಗೆ ಸಜ್ಜುಗೊಂಡ ಪಾಕಿಸ್ತಾನದ ಪಡೆಗಳು ಖೇಮ್‌ಕರಣ್ ಸೆಕ್ಟರ್‌ನ ಭಿಕ್ವಿಂಡ್ ರಸ್ತೆಯ ಚೀಮಾ ಗ್ರಾಮದತ್ತ ಆಕ್ರಮಣ ಆರಂಭಿಸಿದ್ದವು. ಫಿರಂಗಿ ಗುಂಡುಗಳನ್ನು ಎಸೆಯುತ್ತಿದ್ದ ಶತ್ರುಪಡೆಯ ಸಮರ ಟ್ಯಾಂಕುಗಳು 9ಗಂಟೆಯ ಹೊತ್ತಿಗಾಗಲೇ ಭಾರತದ ಪ್ರದೇಶದಲ್ಲಿ ಮುನ್ನುಗ್ಗುತ್ತಿದ್ದವು. ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಂಡ ತುಪಾಕಿ ದಳದ ಪಡೆಯನ್ನು ಮುನ್ನಡೆಸುತ್ತಿದ್ದ ಕಂಪೆನಿ ಕ್ವಾರ್ಟರ್ ಮಾಸ್ಟರ್ ಹವಲ್ದಾರ್ ಅಬ್ದುಲ್ ಹಮೀದ್ ಶತ್ರುಪಡೆಯ ಗುಂಡಿನ ದಾಳಿಯ ನಡುವೆಯೂ ಎದೆಗುಂದದೆ ಜೀಪಿನಲ್ಲಿ ತಮ್ಮ ಕಾಯಿಲ್‌ಲೆಸ್ ರೈಫಲ್ ಹಿಡಿದು ಆಯಕಟ್ಟಿನ ಸ್ಥಳದಲ್ಲಿ ನಿಂತು ಮುನ್ನುಗ್ಗುತ್ತಿದ್ದ ಟ್ಯಾಂಕ್‌ಅನ್ನು ಉಡಾಯಿಸಿದರು. ತಮ್ಮ ನೆಲೆಯನ್ನು ಬದಲಿಸಿ ಎರಡನೆಯ ಟ್ಯಾಂಕ್‌ಅನ್ನು ನಿಷ್ಕ್ರಿಯಗೊಳಿಸಿದರು. ಎರಡು ಟ್ಯಾಂಕ್‌ಗಳನ್ನು ಕ್ಷಿಪ್ರಗತಿಯಲ್ಲಿ ನಾಶಗೊಳಿಸಿದ್ದರಿಂದ ಆಘಾತಗೊಂಡ ಶತ್ರುಪಡೆ ಹಮೀದ್ ಇರುವ ನೆಲೆಯನ್ನು ಪತ್ತೆ ಹಚ್ಚಿ ಅವರತ್ತ ದಾಳಿಯನ್ನು ತೀವ್ರಗೊಳಿಸಿತು. ಇದರಿಂದ ವಿಚಲಿತರಾಗದ ಹಮೀದ್ ಮೂರನೆಯ ಟ್ಯಾಂಕಿಗೂ ಗುರಿ ಇಟ್ಟು ಗುಂಡು ಹಾರಿಸಿ ಅದನ್ನು ನಿಷ್ಕ್ರಿಯಗೊಳಿಸಿದರು. ಅಷ್ಟರಲ್ಲಿ ವೈರಿಪಡೆಯ ಸ್ಫೋಟಕದಿಂದ ಮಾರಣಾಂತಿಕವಾಗಿ ಗಾಯಗೊಂಡರು.*

*ತೀವ್ರಗಾಯಗೊಂಡರೂ ಸಮರ ಟ್ಯಾಂಕುಗಳನ್ನು ಒಂದಾದ ಮೇಲೊಂದರಂತೆ ನಿಷ್ಕ್ರಿಯಗೊಳಿಸಿದ ಹಮೀದ್ ಅವರ ಶೌರ್ಯ ಪ್ರತಾಪದಿಂದ ಉತ್ತೇಜನಗೊಂಡ ಸಹಯೋಧರು ಧೈರ್ಯದಿಂದ ಮುನ್ನುಗ್ಗಿ ವೈರಿಪಡೆಯನ್ನು ಹಿಮ್ಮೆಟ್ಟಿಸಿದರು. ತೀವ್ರ ಗಾಯಗೊಂಡರೂ ಲೆಕ್ಕಿಸದೆ ಅಸಾಧಾರಣ ಶೌರ್ಯ ಪ್ರದರ್ಶಿಸಿದ ಹಮೀದ್ ಅವರು ತುಪಾಕಿ ದಳಕ್ಕೆ ಮಾತ್ರವಲ್ಲ ಇಡೀ ಸೈನಿಕ ತುಕಡಿಯ ಧೈರ್ಯ ಸಾಹಸದ ಪ್ರಖರ ನಿದರ್ಶನ. ಭಾರತೀಯ ಸೇನೆಯ ಅತ್ಯುನ್ನತ ಶೌರ್ಯ ಪರಂಪರೆಗೆ ಅನುಗುಣವಾದ ಸಾಹಸ.*

* * *

# 8. ನೆಲಕಚ್ಚಿದ ಪ್ಯಾಟನ್ ಟ್ಯಾಂಕ್ ಪ್ರತಿಷ್ಠೆ

ಎರಡನೇ ಮಹಾಯುದ್ಧದಲ್ಲಿ ಅಮೆರಿಕ ಮತ್ತು ಮಿತ್ರಪಡೆಗಳ ಹೋರಾಟಕ್ಕೆ ಭೀಮ ಬಲ ನೀಡಿದ್ದು ಪ್ಯಾಟನ್ ಯುದ್ಧ ಟ್ಯಾಂಕ್. ಅಮೆರಿಕದ ಥರ್ಡ್ ಆರ್ಮಿಯ ಜನರಲ್ ಜಾರ್ಜ್ ಎಸ್. ಪ್ಯಾಟನ್ ಯುದ್ಧದಲ್ಲಿ ಟ್ಯಾಂಕ್ ಬಳಸುವುದನ್ನು ಪ್ರತಿಪಾದಿಸಿದ್ದ. ಆದ್ದರಿಂದ ಸಮರ ಟ್ಯಾಂಕ್‌ಗೆ ಆತನ ಹೆಸರನ್ನೇ ಇಡಲಾಗಿತ್ತು. ಎರಡನೇ ಮಹಾಯುದ್ಧದಲ್ಲಿ ಅಮೆರಿಕ ಮತ್ತು ಮಿತ್ರದೇಶಗಳ ಪಡೆಗಳಿಗೆ ಗೆಲುವು ತಂದಿದ್ದ ಈ ಪ್ಯಾಟನ್ ಟ್ಯಾಂಕ್‌ಗಳನ್ನು ನಂತರ ಅಮೆರಿಕ ಪಾಕಿಸ್ತಾನಕ್ಕೆ ಒದಗಿಸಿತ್ತು. ಅವನ್ನೇ ಪಾಕಿಸ್ತಾನ 1965ರ ಯುದ್ಧದಲ್ಲಿ ಭಾರತದ ವಿರುದ್ಧ ಬಳಸಿತು.

ಅಮೆರಿಕ ನಿರ್ಮಿಸಿದ ಅತ್ಯಾಧುನಿಕ ಟ್ಯಾಂಕ್‌ಗಳು ಮತ್ತು ಇನ್ನಿತರ ಯುದ್ಧೋಪಕರಣಗಳನ್ನು ಪಾಕಿಸ್ತಾನ ಸೇನೆ ಭಾರತದ ವಿರುದ್ಧ ಬಳಸಿತ್ತು. ಆದರೆ, ಯುದ್ಧೋಪಕರಣಗಳಿಗಿಂತಲೂ ಯೋಧರ ಧೈರ್ಯ ಸಾಹಸ ಮತ್ತು ಸೇನಾಧಿಕಾರಿಗಳ ಚಾಣಾಕ್ಷ ಸಮರ ತಂತ್ರದ ಕಾರಣ ಯುದ್ಧದಲ್ಲಿ ಭಾರತದ ಕೈ ಮೇಲಾಯಿತು. ಸೋವಿಯತ್ ಒಕ್ಕೂಟದ ಮಧ್ಯಸ್ಥಿಕೆಯಲ್ಲಿ ಭಾರತ– ಪಾಕಿಸ್ತಾನದ ಮಧ್ಯೆ ನಡೆದಿದ್ದ ಯುದ್ಧ ಕೊನೆಯಾಯಿತು. ತಾಷ್ಕೆಂಟ್‌ನಲ್ಲಿ ಈ ಕುರಿತ ಒಪ್ಪಂದವೂ ಆಯಿತು. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಲು ಹೋಗಿದ್ದ ಅಂದಿನ ಭಾರತದ ಪ್ರಧಾನಿ ಲಾಲ್ ಬಹಾದೂರ್ ಶಾಸ್ತ್ರಿ ಅಲ್ಲಿಯೇ ಹೃದಯಾಘಾತದಿಂದ ಮೃತರಾಗಿದ್ದುದು ಒಂದು ಮರೆಯಲಾಗದ ದುರಂತ.

ಭಾರತದ ರಾಜಸ್ತಾನದ ಗಡಿಯ ಕಛ್ ಪ್ರದೇಶದಲ್ಲಿ ಮುನ್ನುಗ್ಗುವ ಮೂಲಕ ಕಾಲು ಕೆರೆದು ಯುದ್ಧಕ್ಕೆ ಬಂದಿದ್ದ ಪಾಕಿಸ್ತಾನ ಭಾರತೀಯ ಪಡೆಗಳಿಂದ ತೀವ್ರ ಮುಖಭಂಗ ಅನುಭವಿಸಿತು. ಯುದ್ಧದಲ್ಲಿ ಪಾಕಿಸ್ತಾನದ ಕಮಾಂಡರ್ ಮೇಜರ್ ಜನರಲ್ ನಾಸಿರ್ ಅಹಮದ್ ಖಾನ್ ಸ್ವತಃ ಗಾಯಗೊಂಡರು. ಪಾಕಿಸ್ತಾನದ 165 ಟ್ಯಾಂಕುಗಳು ನಷ್ಟವಾದವು. ಅವುಗಳಲ್ಲಿ ಅರ್ಧದಷ್ಟು ಹವಲ್ದಾರ್ ಅಬ್ದುಲ್ ಹಮೀದ್ ಶೌರ್ಯ ಪ್ರದರ್ಶಿಸಿದ ಖೇಮ್‌ಕರಣ್ ಸಮರ ಭೂಮಿಯಲ್ಲಿ ಧ್ವಂಸವಾದವು. ಸುಸ್ಥಿತಿಯಲ್ಲಿದ್ದ ಹಲವಾರು ಟ್ಯಾಂಕುಗಳನ್ನು ಭಾರತೀಯ ಸೇನೆ ವಶಪಡಿಸಿಕೊಂಡಿತು.
ಮುಂದೆ ಪಾಕಿಸ್ತಾನದ ಸೇನೆಯ ಮುಖ್ಯಾಧಿಕಾರಿಯಾಗಿ ನಂತರ ಅಧ್ಯಕ್ಷರಾಗಿ ಅಧಿಕಾರ ಹಿಡಿದ ಪರ್ವೇಜ್ ಮುಷರಫ್ 1965ರ ಯುದ್ಧದಲ್ಲಿ ಲೆಫ್ಟಿನೆಂಟ್ ಆಗಿ ಭಾಗವಹಿಸಿದ್ದರು.
ಇಡೀ ಯುದ್ಧದಲ್ಲಿ ಅಸಾಧಾರಣ ಶೌರ್ಯ ಪ್ರದರ್ಶಿಸಿದವರು ಹವಲ್ದಾರ್ ಅಬ್ದುಲ್ ಹಮೀದ್. ತಮ್ಮ ರೈಫಲ್‌ನಿಂದ ಪಾಕಿಸ್ತಾನದ ಏಳು ಟ್ಯಾಂಕುಗಳನ್ನು ಉರುಳಿಸಿ ಶೌರ್ಯ ಪ್ರದರ್ಶಿಸಿದರು.

ಭಾರೀ ಸಂಖ್ಯೆಯ ಯುದ್ಧ ಟ್ಯಾಂಕ್‌ಗಳನ್ನು ಮುಂದೆ ಮಾಡಿಕೊಂಡು ಯುದ್ಧಕ್ಕೆ ಬಂದಿದ್ದ ಪಾಕಿಸ್ತಾನ ನೂರಾರು ಟ್ಯಾಂಕುಗಳನ್ನು ಕಳೆದುಕೊಂಡಿತು. ಖೇಮ್‌ಕರಣ್ ಪ್ರದೇಶದಲ್ಲಿ ಧ್ವಂಸಗೊಂಡು ಬಿದ್ದಿದ್ದ ಟ್ಯಾಂಕುಗಳನ್ನು ನೋಡಿದ ಸಮರತಜ್ಞರು ಆ ಪ್ರದೇಶವನ್ನು 'ಟ್ಯಾಂಕುಗಳ ಸಮಾಧಿ ಸ್ಥಳ'ವೆಂದು ಬಣ್ಣಿಸಿದರು. ಪಾಕಿಸ್ತಾನದಿಂದ ವಶಪಡಿಸಿಕೊಂಡ ಎಲ್ಲ ಟ್ಯಾಂಕ್‌ಗಳನ್ನು ಭಾರತದ ಸೇನೆ ಒಂದೆಡೆ

ಪ್ರದರ್ಶಿಸಿ ಅದನ್ನು 'ಪ್ಯಾಟನ್ ನಗರ' ಎಂದು ಕರೆಯಿತು. 'ಪ್ಯಾಟನ್ ನಗರ'ಕ್ಕೆ ಅಂದಿನ ರಾಷ್ಟ್ರಪತಿ ಸರ್ವೇಪಲ್ಲಿ ರಾಧಾಕೃಷ್ಣನ್, ಪ್ರಧಾನಿ ಲಾಲ್ ಬಹಾದೂರ್ ಶಾಸ್ತ್ರಿ ಅವರು ಭೇಟಿ ಮಾಡಿ ಭಾರತೀಯ ಯೋಧರ ಧೈರ್ಯ ಸಾಹಸಗಳನ್ನು ಕೊಂಡಾಡಿದರು. ಕೆಲವು ದಿನಗಳ ನಂತರ ಆ ಟ್ಯಾಂಕ್‌ಗಳನ್ನು ಭಾರತದ ವಿವಿಧ ಸೈನಿಕ ನೆಲೆಗಳಿಗೆ ಸ್ಥಳಾಂತರಿಸಲಾಯಿತು. ಪಾಕಿಸ್ತಾನದ ವಿರುದ್ಧ ಗಳಿಸಿದ ವಿಜಯದ ಸಂಕೇತ ಪಾರಿತೋಷಕಗಳನ್ನಾಗಿ ಅವುಗಳನ್ನು ಪ್ರದರ್ಶಿಸಲಾಗಿದೆ. ಬೆಂಗಳೂರಿನಲ್ಲಿಯೂ ಒಂದು ಟ್ಯಾಂಕ್ ಪ್ರದರ್ಶನಕ್ಕಿದೆ.

* * *

# 9. ಗೌರವ– ಸ್ಮರಣೆ

1933ರ ಜುಲೈ ಒಂದರಂದು ಜನಿಸಿದ್ದ ಹವಲ್ದಾರ್ ಅಬ್ದುಲ್ ಹಮೀದ್ ತಮ್ಮ 31ನೆಯ ವಯಸ್ಸಿನಲ್ಲಿಯೇ ದೇಶದ ರಕ್ಷಣೆಗಾಗಿ ವೀರಗತಿಯನ್ನು ಹೊಂದಿದರು. ಸೇನೆಯಲ್ಲಿ ಹನ್ನೊಂದು ವರ್ಷ ಸೇವೆ ಸಲ್ಲಿಸಿದ್ದರು. ಯುದ್ಧಭೂಮಿಯಲ್ಲಿ ವೀರಗತಿ ಹೊಂದಿದ ಅವರ ಪಾರ್ಥಿವ ಶರೀರಕ್ಕೆ ಯುದ್ಧಭೂಮಿಯಾಗಿ ಮಾರ್ಪಟ್ಟಿದ್ದ 'ಅಸಲ್ ಉತ್ತರ್' ಗ್ರಾಮದಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯವಿಧಿಗಳನ್ನು ನೆರವೇರಿಸಲಾಯಿತು. ಅವರ ಸಮಾಧಿ ನಿರ್ಮಿಸಿದ ಸ್ಥಳದಲ್ಲಿಯೇ ಮಸೀದಿಯನ್ನು ಕಟ್ಟಲಾಗಿದೆ. ಅವರ ಸಾಹಸಗಾಥೆಯನ್ನು ವಿವರಿಸುವ ವಿಜಯಸ್ಥಂಭವನ್ನು ಸೇನೆ ನಿರ್ಮಿಸಿದೆ. ಅವರು ಹುತಾತ್ಮರಾದ ಸೆಪ್ಟೆಂಬರ್ 10 ರಂದು ಪ್ರತಿವರ್ಷ ಅಲ್ಲಿ ಜಾತ್ರೆಯನ್ನು ಸಂಘಟಿಸಲಾಗುತ್ತಿದೆ. ಅಸಲ್ ಉತ್ತರ್ ಗ್ರಾಮದ ಜನತೆ ಹುತಾತ್ಮ ಅಬ್ದುಲ್ ಹಮೀದ್ ಅವರ ಹೆಸರಿನಲ್ಲಿ ಒಂದು ಆರೋಗ್ಯಕೇಂದ್ರ, ಶಾಲೆ ಮತ್ತು ಗ್ರಂಥಾಲಯವನ್ನು ತೆರೆದು ನಿರ್ವಹಿಸಿಕೊಂಡು ಬರುತ್ತಿದ್ದಾರೆ.

ಅವರ ಸ್ವಂತ ಜಿಲ್ಲೆಯಾದ ಉತ್ತರ ಪ್ರದೇಶ ಗೋರಖಪುರ ಜಿಲ್ಲೆಯ ಫತೇಪುರ ಸಮೀಪದ ಜುಂಗಿಯಾದಲ್ಲಿ ವೀರ ಅಬ್ದುಲ್ ಹಮೀದ್ ಸ್ಮಾರಕ ಮಹಾವಿದ್ಯಾಲಯವನ್ನು ಆರಂಭಿಸಲಾಗಿದೆ.

ಉತ್ತರ ಪ್ರದೇಶದ ಸೇತುವೆಯೊಂದಕ್ಕೆ ಹಮೀದ್ ಅವರ ಹೆಸರನ್ನು ಇಡಲಾಗಿದೆ.

ಹಮೀದ್ ಅವರ ಗೌರವಾರ್ಥ ಭಾರತೀಯ ಸೇನೆ 1979ರ ಸೆಪ್ಟೆಂಬರ್ 10ರಂದು ವಿಶೇಷ ಪೋಸ್ಟಲ್ ಸೇವೆಯನ್ನು ಬಿಡುಗಡೆ ಮಾಡಿತ್ತು.

ಭಾರತೀಯ ಅಂಚೆ ಇಲಾಖೆಯೂ 2000ರ ಜನವರಿ 28ರಂದು ಹಮೀದ್ ಗೌರವಾರ್ಥ ವಿಶೇಷ ಅಂಚೆಚೀಟಿಯನ್ನು ಬಿಡುಗಡೆ ಮಾಡಿತ್ತು. ಮೂರು ರೂಪಾಯಿ ಮುಖಬೆಲೆಯ ಅಂಚೆ ಚೀಟಿಯಲ್ಲಿ ಹಮೀದ್ ಅವರ ಚಿತ್ರದ ಜೊತೆಗೆ ಅವರು ಬಳಸಿದ್ದ ರಿಕಾಯ್ಲೆಸ್ ರೈಫಲ್ ಚಿತ್ರವನ್ನೂ ಮುದ್ರಿಸಲಾಗಿತ್ತು.

ಹುತಾತ್ಮ ಅಬ್ದುಲ್ ಹಮೀದ್ ಸ್ಮರಣೆಗೆ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದ ಸೈನ್ಯದ ಕಟ್ಟಡದ ಒಂದು ಭಾಗಕ್ಕೆ 'ಅಬ್ದುಲ್ ಹಮೀದ್ ಬ್ಯಾರಕ್' ಎಂದು ಹೆಸರಿಡಲಾಗಿದೆ.

ಹಮೀದ್ ಅವರ ಜನ್ಮಸ್ಥಳವಾದ ಉತ್ತರ ಪ್ರದೇಶದ ಧಾಮಪುರದಲ್ಲಿ ಸ್ಮಾರಕವೊಂದನ್ನು ನಿರ್ಮಿಸಲಾಗಿದೆ. ಅದನ್ನು ಹಮೀದ್ ಅವರ 46ನೇ ಪುಣ್ಯತಿಥಿಯ ಸಂದರ್ಭದಲ್ಲಿ ನವೀಕರಿಸಲಾಯಿತು. ನವೀಕರಣದ ಸಂದರ್ಭದಲ್ಲಿ ಹಮೀದ್ ಅವರ ನೂತನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು. ಪ್ರತಿಮೆಯ ಸುತ್ತ ಉದ್ಯಾನವೊಂದನ್ನು ನಿರ್ಮಿಸಲಾಯಿತು. ಬೆಂಗಳೂರಿನ ಫ್ಲಾಗ್ಸ್ ಆಫ್ ಆನರ್ ಫೌಂಡೇಷನ್ ಈ ನವೀಕರಣ ಕಾರ್ಯದಲ್ಲಿ ಮುಂದಾಗಿತ್ತು. ಹಮೀದ್ ಅವರ ಪತ್ನಿ ರಸೂಲನ್ ಬೀಬಿ ಅವರಿಗೆ ಈ ಸಂದರ್ಭದಲ್ಲಿ ಐದು ಲಕ್ಷ ರೂಪಾಯಿಗಳ ಚೆಕ್ ಅನ್ನು ಭಾರತೀಯ ಸೇನೆಯ ಪರವಾಗಿ ನೀಡಲಾಯಿತು. ನವೀಕರಣ ಕಾಮಗಾರಿಗಳನ್ನು ಹಮೀದ್ ಅವರ ಮೊಮ್ಮಕ್ಕಳಲ್ಲಿ ಒಬ್ಬನಾದ ಜಮೀಲನ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಲಾಯಿತು.

ಹುತಾತ್ಮ ಅಬ್ದುಲ್ ಹಮೀದ್ ಅವರನ್ನು ಪ್ರತಿ ಸೆಪ್ಟೆಂಬರ್ 10ರಂದು ಸ್ಮರಿಸಿಕೊಳ್ಳುವ ಕಾರ್ಯಕ್ರಮಗಳು ಅವರ ಹುಟ್ಟೂರು ಧಾಮಪುರದಲ್ಲಿ ನಡೆಯುತ್ತಿವೆ. ಅವರ ಹೆಸರಿನಲ್ಲಿ ಟ್ರಸ್ಟ್ ಒಂದು ಅಸ್ತಿತ್ವಕ್ಕೆ ಬಂದಿದೆ. ಅನೇಕ ಸಮಾಜೋಪಯೋಗಿ ಕೆಲಸಗಳನ್ನು ನಿರ್ವಹಿಸುತ್ತಿದೆ.

ಹಮೀದ್ ಅವರಿಗೆ ನಾಲ್ವರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳಿದ್ದು ಅವರೆಲ್ಲ ವಿವಿಧ ಕಡೆ ನೆಲೆಸಿದ್ದಾರೆ. ಹಿರಿಯವನು ಮಧ್ಯಪ್ರದೇಶದಲ್ಲಿ, ಎರಡನೆಯವನು ಉತ್ತರ ಪ್ರದೇಶದ ಕಾನ್‌ಪುರದಲ್ಲಿ, ಮೂರನೆಯ ಮಗ ತಲತ್ ಮಹಮದ್ ಜಾರ್ಖಂಡ್‌ನಲ್ಲಿ ನೆಲೆಸಿದ್ದಾರೆ. ಕೊನೆಯ ಮಗ ರೈಲ್ವೆಯಲ್ಲಿ ನೌಕರಿಯಲ್ಲಿದ್ದು ಹುಟ್ಟೂರು ಧಾಮಪುರದ ಸನಿಹದಲ್ಲಿದ್ದಾನೆ. ಅವರ ಏಕೈಕ ಹೆಣ್ಣುಮಗಳು ಧಾಮಪುರದ ಬಳಿಯೇ ಇದ್ದಾಳೆ.

'ನಮ್ಮ ತಾತ ಒಳ್ಳೆಯ ಗುರಿಕಾರರೆಂದು ಅವರಿವರು ಹೇಳುತ್ತಾ ಇದ್ದುದನ್ನು ಕೇಳಿದ್ದೇನೆ. ಹಾರುತ್ತಿದ್ದ ಹಕ್ಕಿಯನ್ನು ಬಂದೂಕಿನಿಂದ ಹೊಡೆದು ಉರುಳಿಸುವಷ್ಟು ನಿಖರ ಗುರಿ ಅವರದ್ದೆಂದು ಅವರ ಸಮಕಾಲೀನರು ಹೇಳುತ್ತಾರೆ' ಎನ್ನುತ್ತಾನೆ ಹಮೀದ್ ಅವರ ಎರಡನೇ ಪುತ್ರ ತಲತ್ ಮಹಮದ್ ಅವರ ಮಗ ರಶೀದ. 'ಅವಕಾಶ ನೀಡಿದರೆ ತಾತ ಸೇವೆ ಸಲ್ಲಿಸುತ್ತಿದ್ದ ಸೇನೆಯ ವಿಭಾಗದಲ್ಲಿಯೇ ಸೇರಿ ದೇಶ ಸೇವೆ ಮಾಡುವುದಕ್ಕೆ ಸಿದ್ಧ' ಎನ್ನುವುದು ರಶೀದನ ಹೇಳಿಕೆ. ಅಷ್ಟರಮಟ್ಟಿಗೆ ಅಬ್ದುಲ್ ಹಮೀದ್ ಅವರ ಸಾಹಸ ಪೀಳಿಗೆಯಿಂದ ಮುಂದುವರಿಯುವ ಲಕ್ಷಣ ಸೂಚಿಸಿದೆ.

ಅಬ್ದುಲ್ ಹಮೀದ್ ಅವರ ಮೊಮ್ಮಕ್ಕಳಲ್ಲಿ ಒಬ್ಬರಾದ ಜಮೀರ್ ಅಲಂ ವಾರಾಣಸಿಯಲ್ಲಿದ್ದಾರೆ.

# 10. ಅಣ್ಣಾ ಹಜಾರೆ ಸಹವರ್ತಿ

1965ರ ಯುದ್ಧದಲ್ಲಿ ಖೇಮ್‌ಕರಣ್ ಪ್ರದೇಶದಲ್ಲಿ ಯುದ್ಧ ಭೂಮಿಯಲ್ಲಿ ಕಾರ್ಯಾಚರಣೆಗೆ ನಿಯೋಜಿತನಾಗಿದ್ದ ಇನ್ನೊಬ್ಬ ಸಾಹಸಿ ಕಿಶನ್ ಬಾಬುರಾವ್ ಹಜಾರೆ. ಟ್ರಕ್ ಚಾಲಕನಾಗಿ ಗಡಿ ನೆಲೆಗಳಿಗೆ ಮದ್ದುಗುಂಡು ಮತ್ತು ಪದಾತಿ ದಳದ ಯೋಧರನ್ನು ಒಯ್ಯುತ್ತಿದ್ದರು. ಆಗ ಶತ್ರು ಪಡೆಯ ಬಾಂಬ್ ಬಿದ್ದು ಟ್ರಕ್‌ನಲ್ಲಿದ್ದ ಎಲ್ಲ ಯೋಧರೂ ಹುತಾತ್ಮರಾದರು. ಆಗ ಆಶ್ಚರ್ಯಕರವಾಗಿ ಉಳಿದುಕೊಂಡಿದ್ದವರು ಟ್ರಕ್ ಚಾಲಕ ಕಿಶನ್ ಬಾಬುರಾವ್. ಮುಂದೆ ಅವರು ತಮ್ಮ ಸ್ವಂತ ಊರಾದ ಮಹಾರಾಷ್ಟ್ರದ ರಾಳೇಗಣಸಿದ್ಧಿಗೆ ಆಗಮಿಸಿ ವಿಧಾಯಕ ಕಾರ್ಯಕ್ರಮಗಳ ಮೂಲಕ ದೇಶದಾದ್ಯಂತ ಗಮನ ಸೆಳೆದರು. ಅಣ್ಣಾ ಹಜಾರೆ ಎಂಬ ಹೆಸರು ಹೊತ್ತ ಈ ಯೋಧ ಸದ್ಯ ದೇಶದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದ್ದಾರೆ.

* * *